


ಅಪರಂಜಿ

ತಿಳಿನಗೆಯ ಕಾರಂಜಿ

- ಆನಂದ್
- ಅಪ್ರಸ್ತುತ
- ಲೀಲಾಮಿರ್ಜಿ
- ಶಿವು
- ಹಿರಿಯೂರು ರಾಘವೇಂದ್ರ
- ಶ್ಯಾಮು
- ಚನ್ನಗಿರಿ ಸುಧೀಂದ್ರ
- ಸೋಮಿ
- ಡಾ॥ ಎಸ್. ಕೃಷ್ಣಮೂರ್ತಿ
- ಡಾ॥ ಮುರಲೀಧರ ದೇಶಪಾಂಡೆ
- ಪಿ. ಜಿ. ರಾಜೇಶ್
- ಚಂದ್ರ

ಸಂಪುಟ–೩
ಸಂಚಿಕೆ–೭
ಮಾರ್ಚ್–1986

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.

ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :

ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ.15/-

ಬಿಡಿ ಪ್ರತಿ ;—ಒಂದೂವರೆ ರೂಪಾಯಿ

ಎರಡು ಮಾತು

ಅಪರಂಜಿ ತಿಳಿಹಾಸ್ಯಕ್ಕೆ ಮೀಸಲಾದ ಮಾಸಪತ್ರಿಕೆ. ಉತ್ತಮ ಅಭಿರುಚಿಯ ಹಾಸ್ಯ ಲೇಖನಗಳು, ಚುಟಕಗಳು, ಕವನಗಳು ಹಾಗೂ ವ್ಯಂಗ್ಯ ಚಿತ್ರಗಳು ಇವು ಗಳಿಗೆ ಅಪರಂಜಿಯಲ್ಲಿ ಸದಾ ಸ್ವಾಗತ. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಉಂಟು. ಆಗತ್ಯವಾಗಿ ನಿಮ್ಮ ಬರಹಗಳನ್ನು ಕಳಿಸಿ.

ಶಿವಕುಮಾರ್

ಸಂಪಾದಕ

ಅಪರಂಜಿ ಕಾರ್ಯಾಲಯ

36, 6ನೇ ಮುಖ್ಯ ರಸ್ತೆ

ಮಲ್ಲೇಶ್ವರಂ

ಬೆಂಗಳೂರು–560 003.

ಈ ಸಂಚಿಕೆಯಲ್ಲಿ .. ..

ಮುದ್ರಣ : ಇಂಪ್ರೆಷ್ಸ್, ಮಲ್ಲೇಶ್ವರಂ, ದೂರವಾಣಿ : 362989, 363444



(ತಿಳಿನಗೆಯ ಕಾರಂಜಿ)

ಸಂಪುಟ ೩ ಮಾರ್ಚ್ ೮೬ ಸಂಚಿಕೆ ೬

ಬ್ರಹ್ಮದ ಆನಂದವನ್ನು ಅರಿತದನು ಏತಕ್ಕೂ ಹೆದರುವುದಿಲ್ಲ

—ತೈತ್ತೀರಿಯ

ಬ್ರಹ್ಮವು ಎರಡನೆಯದಿಲ್ಲದ್ದು. ಆನಂದ ಸ್ವಭಾವದ್ದು. ತಾನೇ ಅದೆಂದರಿತವನು ಹೆದರಬೇಕಾದದ್ದು ಏನೂ ಇಲ್ಲವೆಂಬ ಅನುಭವದಲ್ಲಿ ನೆಲೆ ನಿಲ್ಲುತ್ತಾನೆ.

ಉಪಾಸನೆಯನ್ನು ಮಾಡುವವನು ದೇವಯಾನದಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ. ಅಲ್ಲಿ ಆತ್ಮಜ್ಞಾನವಾದರೆ ಹಿಂದಿರುಗಿ ಬರುವುದಿಲ್ಲ. ಇಷ್ಟ, ಪೂರ್ತಗಳನ್ನು ಮಾಡುವವನು ಚಂದ್ರಲೋಕಕ್ಕೆ ಹೋಗಿ ಭೋಗಗಳನ್ನು ಅನುಭವಿಸಿ ಹಿಂದಿರುಗುತ್ತಾನೆ. ಈ ಎರಡನ್ನು ಮಾಡದವನು ಸೊಳ್ಳೆ ನೊಣಗಳಾಗಿ ಹುಟ್ಟುತ್ತಾನೆ.

ಈ ಉಪನಿಷತ್ತಿನ ವಾಕ್ಯವನ್ನು ಪ್ರಯೋಗಶಾಲೆಯಲ್ಲಿ ಪ್ರಮಾಣಿಸಲಾಗುವುದಿಲ್ಲ,

ಹಾಗೆಯೇ ಲೌಕಿಕದಲ್ಲೂ ಆಗಿದೆ." ಅಧಿಕಾರ ಕೆಲಸ, ಹಣ ಇದ್ದವನು ಇದು ಪುಣ್ಯ, ಪಾಪ, ಸರಿ, ತಪ್ಪು, ಸುಳ್ಳು, ಠಕ್ಕು ಏತಕ್ಕೂ ಹೆದರುವುದಿಲ್ಲ. ಹಾಗೆಯೇ ಅವುಗಳನ್ನು ಕೊಡಬಲ್ಲವರ ಇಷ್ಟಗಳನ್ನು ಪೂರ್ತಿ ಸಲ್ಲಿಸಿ, ಆ. ಸ್ಥಾನ ಸಂಪತ್ತುಗಳನ್ನು ಪಡೆದು ಅವಧಿ ಮುಗಿಯುತ್ತಲೇ ಉಗಿಳಿಯುತ್ತಾನೆ. 'ಅವರ' ಇಷ್ಟಗಳನ್ನು ಪೂರ್ತಿಮಾಡದವನು ಸೊಳ್ಳೆ, ನೊಣಗಳಂತೆ ಬಾಳುತ್ತಾನೆ.

ಹಾಗಾದರೆ ಏನು ಮಾಡೋಣ ? ಉಪನಿಷತ್ತು ಹೇಳುತ್ತದೆ.

'ತಸ್ಮಾಜ್ಜುಗುಪ್ಸೇತ' ಆದುದರಿಂದ ಇಂತಹ ಸಮ್ಮ ಪರಿಸ್ಥಿತಿಗಾಗಿ ಜುಗುಪ್ಸೆ ಪಡಬೇಕು.

ಅಪರಂಜಿ ಕಿಡಿ

— ಆನಂದ್

ದೆಹಲಿಯಲ್ಲಿ ಗೂಢಚರ್ಯೆ ಆಪಾದನೆ

—ಸುದ್ದಿ

ಚಂದ್ರಾಕರ್ ಅವರಿಗೆ ಅರ್ಧ ಚಂದ್ರ ! ..

* * * * *

ವಿಶ್ವ ಕನ್ನಡ ಸಮ್ಮೇಳನದಲ್ಲಿ ಕಾರಂತರ ಮಾತುಗಳ ಬಗ್ಗೆ ವಿಧಾನ ಸಭೆಯಲ್ಲಿ ಚಕಮಕಿ

—ಪತ್ರಿಕೆ

ಅವರ ಮಾತುಗಳು ಖಾರಾಂತ ವಾದಹಾಗಿದೆ !

* * * *

ಒಂದೊಂದು ಇಟ್ಟಿಗೆಯಾಗಿ ಪಕ್ಷವನ್ನು ಕಟ್ಟುತ್ತೇವೆ.

—ಶ್ರೀ ಫರ್ನಾಂಡೆಸ್

ಕಂಟ್ರಾಕ್ಟರ್ ಯಾರೋ ?

* * * * *

ಸಿನಿಮಾ ಜಾಹೀರಾತು : "ಹೊಸ ನೀರು"

ಪ್ರಸ್ತುತ ಪರಿಸ್ಥಿತಿಯಲ್ಲಿ ಈ ತರಹ ಪೋಸ್ಟರುಗಳನ್ನು ಖಂಡಿಸಬೇಕು !

* * * *

ಹೆಂಡದ ಸೀಸೆ ಗುತ್ತಿಗೆ ಪ್ರಕರಣ

—ಶೀರ್ಷಿಕೆ

ಬಾಟಲ್ ಬಗ್ಗೆ Battle ಶುರುವಾಗಿದೆ !

*   *   *   *   *

ಆಡಳಿತದಲ್ಲಿ ಸರಳ ಕನ್ನಡಕ್ಕಾಗಿ ಕನ್ನಡ ಪರಿಷ್ಕರಣ ಸಮಿತಿ

—ಸುದ್ದಿ

'ಪರಿಷ್ಕರಣ' ಅಂದರೇನು ?

*   *   *   *   *

ಮೈಸೂರು ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಗುದ್ದಾಟ.

—ಸುದ್ದಿ

ಲೇಖಣಿಗಿಂತ ಮುಷ್ಟಿಗೇ ಬಲ ಹೆಚ್ಚು !

*   *   *   *   *

ಮುಖಾಮುಖಿ ೮

—ಅಪ್ರಸ್ತುತ

ಅಪರಂಜಿ ಆ ಊರು ಈ ಊರು ತಿರುಗಾಡುತ್ತಾ, ಕೊನೆಗೆ ಒಂದೂರಿಗೆ ಬಂದಳು. ಆ ಊರಿನಲ್ಲಿ ಭಾರೀ ಉತ್ಸವ. ಒಂದು ಜೀಪಿನ ಮೇಲೆ ಮೈಸೂರು ಪೇಟಾ ಕಟ್ಟಿದ ಒಬ್ಬ ಆಜಾನುಬಾಹುವಿನ ಚಿತ್ರದ ಮೆರವಣಿಗೆ. ಊರಿನ ಎಲ್ಲಾ ಚಿಳ್ಳೆಪಿಳ್ಳೆಗಳೂ, ಗಂಡು ಹೆಣ್ಣುಗಳೂ ಗುಬ್ಬಿ ಕಾಗೆಗಳೂ, ಬೀದಿ ದನಗಳೂ ನಿಂತುನೋಡುತ್ತಿವೆ. ಜಯಕಾರಮಾಡುತ್ತಿವೆ. ಖುದ್ದೂಸ್ ಸಾಹೇಬರೂ, ಕಳ್ಳೆಕಾಯಿ ಶಾಸ್ತ್ರಿಗಳ ಮಗ ಕಿಟ್ಟಪ್ಪನೂ, ಯಾರ ಯಾರ ಜೊತೆಯಲ್ಲೋ ಆ ಮೆರವಣಿಗೆಯಲ್ಲಿ ಹೋಗುತ್ತಿದ್ದಾರೆ.

ಅಪರಂಜಿ ಬಾಯಿಬಿಟ್ಟು ನೋಡುತ್ತಾ ನಿಂತಿದ್ದಾಳೆ. ಅವಳ ಮುಂದೆ ಹನುಮಣ್ಣ ನಿಂತು ಜೈ, ಜೈ ಅಂತ ಗಂಟಲು ನರ ಹರಿಯುವ ಹಾಗೆ ಕೂಗುತ್ತಿದ್ದಾನೆ. ಹನುಮಣ್ಣ ಹಿಂದಕ್ಕೆ ತಿರುಗಿ "ಇಲ್ಯಾಕೆ ಬಂದೆ ಅಪರಂಜೀ" ಎಂದು ಕೇಳಿದ

"ಇದೆಲ್ಲಾ ಏನು ಹನುಮಣ್ಣ ?"

"ನಂಗೂ ಇದೇ ಪ್ರಸ್ನೆ. ಇಲ್ಲಿ ಜನ ಯಾಕೆ ಹಿಂಗೆ ಸೇರಿದ್ರು ಅಂತ ನೋಡಕ್ಕೆ ಬಂದೆ. ಇಲ್ಲೇ ನಿಂತ್ಗಂಡೆ."

"ಯಾಕೆ ಸೇರಿದ್ರು?"

"ಎಂಕಣ್ಣ ಹುಟ್ಟಿ ನೂರುವರ್ಸ ಆತು, ಅದಕ್ಕೆ"

"ಯಾರು ಹನ್ಮಣ್ಣ, ಈ ಎಂಕಣ್ಣ"

"ನಾವು ಆಡ ಮಾತು ಕನಡ, ಅದಕ್ಕಾಗಿ ದುಡದೋರು"

"ಹೆಂಗೆ ದುಡ್ದರು"

"ಕನಡ ಬರೀ ಮಾತಾಡೊ ಮಾತಲ್ಲ, ಇದ್ರಗೆ ಬರೀಭೌದು. ಹಿಂಗೆ ಬರದ್ರೆ ಸರಿ, ಹಿಂಗೆ ಬರದ್ರೆ ತಪ್ಪಾದೀತು. ಅಂತ ಹೇಳಿಕೊಟ್ರು. ಚೆನ್ನಾಗಿ ಬರದೋರ್ನೆಲ್ಲಾ. ಬರೀರಿ ಅಂತ ಬೆನ್ನು ಚಪ್ರಿಸಿದ್ರು. ಅವ್ರೆಲ್ಲಾ ದೊಡ್ಡ ಪಂಡಿತರಾದ್ರು. ಈಗ ಕನಡ ಸರ್ಕಾರದ ಭಾಷೆ ಆಗೆಯ್ತೆ,

"ಹಂಗಾರೆ ನಮುಗೂ ಓರೇರು ಅನ್ನು !"

"ಖುದ್ದೂಸ್ ಸಾಹೇಬ್ರು ಜೊತೆಗೆ ತಿಪ್ಪಣ್ಣ ಐದಾನಲ್ಲ. ಕಿಟ್ಟಪ್ಪ ಐದಾನಲ್ಲಾ ಅವರ ಜೊತೆಗೆ ಹಳ್ಳಿ ಹೊಡಿತಾ ಅದಾನಲ್ಲ. ಅವನು ಎಂಕಣ್ಣನ ಮ್ಯಾಗೆ ಬರದೈದಾನೆ ಏನಂತ ಗೊತ್ತೇ ?

ನೆನಪಿನಂಗಳದಿ ನೆಲೆಸಿದ ದಿವ್ಯ ಚೇತನವೆ
ಪುನಶ್ಚ ಭೂಯೋಪಿ ನಮೋಃ ನಮಸ್ತೆ ॥

"ಏನಂತೆ ಹಂಗೆ ಬರದ್ರೆ ?"

"ಪದ್ಯ ಇರಬೇಕು"

ಅಪರಂಜಿ ಗುಡಿಸಲಿಗೆ ಸೆಕೆಟ್ರಿ ಸಾಹೇಬ್ರು ಬಂದ್ರು. ಅಪರಂಜಿ ಅವರಿಗೆ ಹಲಸಿನ ಚೆಕ್ಕನ್ನು ಕೊಟ್ಟಳು. ಸೆಕೆಟ್ರಿಗಳು ಹಣ್ಣು ತಿನ್ನುತ್ತಾ

"ಅಪರಂಜಿ ನಿಮ್ಮ ಮನೆಯಾಗೆ ಎಷ್ಟು ಜನ ಇದ್ದೀರಿ"? ಎಂದು ಕೇಳಿದರು.

"ಐದೀವಿ ಮಸ್ತಕಂದು ಜನ.

"ನಿಜ, ನಿಮ್ಮ ಮನೇಲಿ ಅಂದ್ರೆ ಈ ಗುಡಿಸಿಲಲ್ಲಿ ಎಷ್ಟೊ ಜನ ಇದೀರಿ ?"

"ಯಾಕೆ ಸ್ವಾಮಿ ?"

"ರೇಷನ್ ಕಾರ್ಡ್ ಕೊಡ್ತೀನಿ ಅದಕ್ಕೆ"

"ನಮುಗ್ಯಾಕೆ ಸ್ವಾಮಿ ಪುಣ್ಯಾತ್ಮರು ಕೊಟ್ಟರೆ ಆಯಿತು. ರೇಷನ್ ಅಂದರೇನು ಸ್ವಾಮಿ ?"

"ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ"

"ಅಯ್ಯೋ ಸ್ವಾಮಿ ಅಷ್ಟಿದ್ರೆ ಸಾಕೆ ?"

"ಮತ್ತಿನ್ನೇನು ಕೊಡಕ್ಕೆ ಸಾಧ್ಯ"

ಅದನ್ನ ಕೊಳ್ಳೋದಕ್ಕೆ ದುಡ್ಡು"

"ಪರಿಹಾರ ಕಾಮಗಾರಿ ಮಾಡ್ತೀವಿ"

"ಅಕ್ಕಿ ಕೊಟ್ರೆ, ಅನ್ನ ಮಾಡಕ್ಕೆ ನೀರು ಬೆಯ್ಸೋದಕ್ಕೆ ಕಟ್ಟಿಗೆ"

"ಅದನ್ನೆಲ್ಲಾ ಕೊಡೋಕೆ ನಮ್ಮ ಕೈಲಿ ಹೇಗೆ ಸಾಧ್ಯ ? ದನ ಕಟ್ಟಿದ್ರೆ ಮೇವು ಕೊಡ್ತೀವಿ"

"ಮೇವು ತಿಂದ ಮ್ಯಾಲೆ ಕುಡಿಯಕ್ಕೆ ನೀರು ? "

"ಅಲ್ಲಾ ಎಷ್ಟು ಊರಿಗೆ ಎಷ್ಟು ಜನಕ್ಕೆ ಅಂತ ನೀರು ಕೊಡೋದಕ್ಕೆ ಸಾಧ್ಯ ನೀನೇ ಹೇಳು. ನೀರಿಲ್ಲದ್ದಕ್ಕೆ ತಾನೇ ಬರ ಬಂದಿದ್ದು?"

"ಯಾಕೆ ಸ್ವಾಮಿ ಹಿಂಗಾಗಿದ್ದು. ಧರ್ಮ ಇಲ್ಲದುಗಾಗಿ ಮಳೆ ಹಿಂಗಾಯ್ತೋ?"

"ಅದೆಲ್ಲಾ ಮೂಢನಂಬಿಕೆ ಅಪರಂಜಿ ವೈಜ್ಞಾನಿಕವಾಗಿ ಧರ್ಮವನ್ನು ಪರೀಕ್ಷಿಸುವುದಕ್ಕೆ ಆಗುವುದಿಲ್ಲ."

"ಯಾಕೆ ಸ್ವಾಮಿ ? ನೀರು ಅಂದ್ರೆ ಮಳೆ ಬರದ ಹಂಗೆ ಆದರೆ ಧರ್ಮ ಕಮ್ಮಿ ಆತು ಅಂತ ಅಲ್ಲೇ ?"

"ಆದರೆ ಅತಿವೃಷ್ಟಿಯಾಗಿ ಎಲ್ಲಾ ಕೊಚ್ಚಿಕೊಂಡು ಹೋದರೆ ಧರ್ಮ ಹೆಚ್ಚಾಯ್ತು ಅಂತಲೇ ? "

"ಹಂಗೇನು ಇಲ್ಲ ಸ್ವಾಮಿ. ಈ ಕೊಲೆ, ಸುಲಿಗೆ. ಕಳ್ಳತನ ಮೋಸ ಹೆಚ್ಚಾಗಿ, ತಂಬಿಗೇಲಿ ನೀರಿಲ್ಲದ ಹಾಗಾಗಿ ಒಟ್ಟಿಗೇ ಅದನ್ನೆಲ್ಲಾ ಕೊಚ್ಚಿಕೊಂಡು ಹೋಗೋದಕ್ಕೆ ಹಂಗೆ ಮಳೆ ಬರ್ತದೆ."

"ಅಂದ್ರೆ, ಧರ್ಮಾನೇ ಇಲ್ಲ ಅಂತಿಯಾ ?"

"ಧರ್ಮ ಐತೆ ಸೆಕೆಟ್ರಿಗಳೇ, ಅದರಂತೆ ನಡೆಯು ಮನ್ಸಿಲ್ಲ"

"ಅದೆಷ್ಟೋ ಲಕ್ಷ ಖರ್ಚು ಮಾಡಿ ಅದೆಷ್ಟೋ ಸಾವಿರವೋ ಲಕ್ಷವೋ ಬಾವಿ ತೋಡಿಸಿದಾರೆ. ಈ ಕಾವಲಿನ ಮನೆಗಳಿಗೂ ಕರೆಂಟ್ ಕೊಟ್ಟಿದ್ದಾರೆ"


“ಎಷ್ಟೋ ಬಾವಿ ಕೆಲಸ ಮಾಡ್ತಾವೋ ಶಿವನೇ ಬಲ್ಲ. ಈ ಕಾಡಿನೊಳಗೆ ಅರವತ್ತು ಬಾವಿ ತೋಡಿದಾರೆ. ಐವತ್ತೆಂಟು ಬತ್ತಿವೆ.”

“ಅದಕ್ಕೇನು ಮಾಡೋಕಾಗುತ್ತೆ?”

“ರಾತ್ರೆಲ್ಲಾ ಕರೆಂಟ್ ಇರಲ್ಲ”

“ಅಲ್ಲಿ ಡ್ಯಾಂ ಒಳ್ಗೇ ನೀರಿಲ್ಲ. ಮಳೆ ಬರ್ದಿದ್ರೆ ಏನು ಮಾಡೋದು”

“ಸೆಕೆಟ್ರಿಗಳೇ, ಮಾಡೋದು ಏನು ಅಂತ ಹೇಳೋಕ್ಕೆ ನಾನು ಯಾರು ? ನೀವೆಲ್ಲಾ ಏಚ್ಚಿ ಮಾಡಿ ಅದೇನಾಡ್ತೀರೋ ಮಾಡ್ರಿ. ಒಂದಿಷ್ಟು ಕಾಫಿ ಕಾಸಿಕೊಡಕ್ಕೆ ಡಬರಿ ತೊಳೆಯಕ್ಕೆ ನೀರಿಲ್ಲ. ಇನ್ನೂ ಚಳಿಗಾಲ ಮುಗ್ದೇ ಇಲ್ಲ. ಬ್ಯಾಸ್ಗೆ ಬಂದ್ರೆ ಏನು ಗತಿ ?



ಎಣ್ಣೆ ಹಚ್ಕೊಂಡ್ಬಿಟ್ರಾ .... ರಾಮಾ ಇವತ್ತು ನೀರು ಬರಲ್ಲಾರೀ !



ಮಾಸಾಶನ ಕೊಟ್ಟ ಮಾತ್ರಕ್ಕೆ ಕಸಬು ಬಿಡೋಕ್ಕಾಗ್ತದಾ !

11

ಮಾದರಿ ಉತ್ತರಗಳು

—ಲೀಲಾ ಮಿರ್ಲೆ

ಶಾಲಿನಿ ಶಾಲೆಯ ಉಪಾಧ್ಯಾಯಿನಿ ಮೊನ್ನೆ ಅವಳ ಮನೆಗೆ ಹೋದಾಗ. ಶಾಲಿನಿ ಮನೆಯಲ್ಲಿರಲಿಲ್ಲ. ಅವಳಿಗಾಗಿ ಕಾಯುತ್ತಿದ್ದಾಗ, ಮೇಜಿನ ಮೇಲಿದ್ದ ಉತ್ತರ ಪತ್ರಿಕೆಗಳ ಕಡತ ಕಣ್ಣಿಗೆ ಬಿತ್ತು. ಹೊತ್ತು ಕಳೆಯಲು ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಕಣ್ಣಾಡಿಸಿದೆ.

ಸಾಮಾನ್ಯ ಜ್ಞಾನದ ಪೇಪರಿರಬೇಕು. ಕೆಲವು ಉತ್ತರ ಪತ್ರಿಕೆಗಳಿಂದ ಆಯ್ದ ಉತ್ತರಗಳಿವು—

1 ಗಾಂಧಿಜೀ ಯಾರು ?

ಇವರು ಅನೇಕ ದೇಶಭಕ್ತಿ ಗೀತೆ ಹಾಗೂ ರಾಷ್ಟ್ರಗೀತೆಯನ್ನು ಬರೆದಿರಬೇಕು. ಅದಕ್ಕೆ ಆಗಸ್ಟ್ 15 ಮುಂತಾದ ದಿನಗಳಲ್ಲಿ. ಟೀ.ವಿ.ಯಲ್ಲಿ ಈ ಗೀತೆಗಳ ಮಧ್ಯೆ ಗಾಂಧಿಯವರ ಚಿತ್ರಗನ್ನು ತೋರಿಸುತ್ತಾರೆ.

2. ಕರ್ನಾಟಕದಲ್ಲಿ "ನಾಡಹಬ್ಬ"ವನ್ನು ಎಂದು ಆಚರಿಸುವರು ?

ಭಾರತ ಬೇರೆ ದೇಶದೊಂದಿಗೆ ಕ್ರಿಕೆಟ್ ಮ್ಯಾಚ್ ಆಡಿದ ದಿನಗಳನ್ನು "ನಾಡ ಹಬ್ಬ" ವೆಂದು ಕರೆಯಬಹುದು. ಏಕೆಂದರೆ ಅಂದು ಶಾಲಾ ಕಾಲೇಜುಗಳಿಗೆ ರಜ ವರುವುದಲ್ಲದೆ, ನಾಡಿಗೆ ನಾಡೇ ಸಂತೋಷಪಡುವ ದಿನಗಳವು.

3. "ಆತಂಕವಾದಿ" ಎಂದರೆ ಯಾರು ?

ಆತಂಕವಾದಿಗಳು ಎಲ್ಲರ ಮನೆಯಲ್ಲೂ ಇರುತ್ತಾರೆ. ನಮ್ಮ ಮನೆಯಲ್ಲಿ ನಮ್ಮ ಅಜ್ಜಿ ಆತಂಕವಾದಿ. ಅವರಿಗೆ ಸದಾ ಏನಾದರು ಅತಂಕ ಇದ್ದೆ ಇರುತ್ತದೆ.

4. ಹಿಂದೂ ಧರ್ಮ ಗ್ರಂಥಗಳು ಯಾವುವು ? ಸಣ್ಣ ಟಿಪ್ಪಣಿ ಬರೆಯಿರಿ.

ಇವು ರಾಮಾಯಣ ಮತ್ತು ಮಹಾ ಭಾರತ. ಇವುಗಳ ಉಪಯೋಗ ವೇನೆಂದರೆ, ಕೆಲವು ಹೆಂಗಸರು (ಅಂದರೆ ಜೀಜಾಬಾಯಿ. ಪುತ್ಥಳಿಬಾಯಿ ಮುಂತಾದ

ವರು) ಇವನ್ನು ಪದೇ ಪದೇ ಓದಿ, ಅದನ್ನು ಅವರ ಮಕ್ಕಳಿಗೆ ಪದೇ ಪದೇ ಹೇಳಿ, ಅವರು ಅದರ ದೆಸೆಯಿಂದ ಮುಂದಾಳುಗಳಾಗಿ ಬಿಟ್ಟರು. ಒಂದು ಶಿವಾಜಿ ಒಂದು ಗಾಂಧಿ ಅಷ್ಟೊಂದು ಗಲಾಟೆ ಎಬ್ಬಿಸಿರುವಾಗ, ಎಲ್ಲಾ ಹೆಂಗಸರು ಇದನ್ನು ಓದಿದ ಪಕ್ಷದಲ್ಲಿ, ಭಾರತದ ತುಂಬಾ ಮುಂದಾಳುಗಳು ತುಂಬಿ ಗೊಂದಲವಾಗಿ ಬಿಡುತ್ತಿತ್ತು.

5. "ರಾಜ್ಯಪಾಲ" ಎಂದರೆ ಯಾರು ? ಇವರ ಕೆಲಸವೇನು ?

ಪ್ರತಿ ರಾಜ್ಯಕ್ಕೂ ಒಬ್ಬ 'ರಾಜ್ಯಪಾಲ'ರಿರುತ್ತಾರೆ. ಬಟ್ಟೆಯನ್ನು ಬಿಳುಪು ಗೊಳಿಸುವ 'ರಾಣಿಪಾಲ್' ನಂತೆ, ರಾಜ್ಯಪಾಲರೂ ಕೊಳೆಯನ್ನು ಹೋಗಲಾಡಿಸ ಬೇಕು. ಉದಾಹರಣೆಗೆ—39 ವರ್ಷದಿಂದ ಉಪಯೋಗಿಸಿರುವ ಗಾಂಧಿ ಟೋಪಿ ತುಂಬಾ ಕೊಳೆಯಾಗಿದೆ. ಅದನ್ನು ಶುಭ್ರಗೊಳಿಸುವುದು ರಾಣಿಪಾಲ, ರಾಜ್ಯಪಾಲ ಇವರುಗಳ ಕೆಲಸ.

6. "ಅಣು ಬಾಂಬಿ"ನ ಬಗ್ಗೆ ನಿಮಗೇನುತಿಳಿದಿದೆ. ಸಂಕ್ಷಿಪ್ತವಾಗಿ ಬರೆಯಿರಿ.

ಇದರ ಬಗ್ಗೆ ವ್ಯಾಖ್ಯಾನ ಅಸಂಬದ್ಧ, ಏಕೆಂದರೆ ಅಣು ಬಾಂಬು ಹಿಂದಿನ ಕಾಲದ ಒನಕೆ ತರಹ. ಮನೆಯಲ್ಲಿ ಬತ್ತ, ಕಾಳು, ಜೋಳ ಕುಟ್ಟಲು ಸಭ್ಯವಾಗಿ ಉಪಯೋಗಿಸಬಹುದು. ಅಥವ ಕಳ್ಳ ಮನೆಗೆ ನುಗ್ಗಿದರೆ ಒನಕೆಯಿಂದ ಅವನ ತಲೆಯನ್ನು ಒಡೆದು ಹಾಕಬಹುದು. ಅದರ ಉಪಯೋಗ ಹೀಗಿರುವಾಗ ಒನಕೆ ಯನ್ನು ಎಸೆಯಲು ಯಾರೂ ತಯಾರಿಲ್ಲ.

ಇಂತಹ ಕೆಲವು ಉತ್ತರಗಳನ್ನು ಓದಿದ ಮೇಲೆ ಶಾಲಿನಿಗೆ ಕರೆಕ್ಷನ್ ಮಾಡಲು ಏಕೆ ಬೋರಾಗದು ಎನ್ನುವುದು ಅರ್ಥವಾಯಿತು.

Some ಭಾಷಣೆ

—ಶಿವು

"ಓ, ಹೋ, ಹೋ, ಹೋ, ನಮಸ್ಕಾರ ರಾಯ್ರಿಗೆ"

"ನಮಸ್ಕಾರ ಸ್ವಾಮಿ. ಹೇಗಿದ್ದೀರಾ ? ಕಾಣಿಸ್ಲೇ ಇಲ್ವಲ್ಲಾ ಇಷ್ಟು ದಿನ"

"ಅಯ್ಯೋ, ಸ್ವಲ್ಪ ಅಲಸ್ಯ ಆಗಿತ್ತೂರೀ ಮೈಗೆ. ನೀವು ಬರ್‍ತಿದೀರ, ರೆಗ್ಯುಲರ್ರಾಗಿ ವಾಕಿಂಗ್‌ಗೆ ?"

"ಏನೋ ಸ್ವಾಮಿ, ಸುಮಾರಾಗಿ. ಯಾಕೋ ನೋಡಿ ಮೊದಲಿನ್ತರಹ ಉತ್ಸಾಹನೇ ಇಲ್ಲಾರೀ, ಬೆಳಗಾಗೆದ್ದು ಬಂದ್ರೂ ಕೂಡ ಏನು ಜನಾರೀ ! ಯಾರನ್ನೋಡಿದ್ರೂ ಜಾಗಿಂಗ್. ಈ ಜಾಗಿಂಗ್ ಮಾಡೋರ ಮಧ್ಯೆ ದಾರಿ ಬಿಡಿಸ್ಕೊಂಡು ವಾಕ್ ಮಾಡೋದೇ ಪ್ರಯಾಸ ನೋಡಿ"

"ಹೌದ್ರೀ ಈಚೀಚೆಗೆ, ಹೀಗೆ ಕಾರಣವಿಲ್ದೆ ಓಡೋರ ಸಂಖ್ಯೆ ಜಾಸ್ತಿ ಆಗ್ತಾನೇ ಇದೆ. ಇದರ ಜೊತೆಗೆ ಈ ಸ್ಲಿಮ್ಮಿಂಗ್ ಕೇಂದ್ರಗಳಂತೂ, ದಿನ ಕ್ಕೊಂದರಂತೆ, ಕಾಣಿಸ್ಕೊಳ್ತಿವೆ. ಎಷ್ಟರ ಮಟ್ಟಿಗೆ ತೂಕ ಇಳಿಸ್ತಾರೋ ಭಗವಂತನೇ ಬಲ್ಲ !"

"ಪರ್ಸಿನ ತೂಕವಂತೂ ಖಂಡಿತಾ ಇಳಿಸ್ತಾರಂತ್ರೀ ! ಅಲ್ಲಾ ಈಗಾಗ್ತಿರೋ ದನ್ನೆಲಾ ಸರ್ವಜ್ಞ ಅಷ್ಟು ಹಿಂದೇನೇ ಹೇಗೆ ಭವಿಷ್ಯ ನುಡಿದಿದ್ದ ನೋಡ್ರಿ !"

"ಅದೇನ್ರಿ ಅವನು ಭವಿಷ್ಯ ನುಡಿದಿದ್ದು ? "

"ಅದೇರೀ, 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' !

‘ಒಂದೇ ಗುರಿ ’’

— ಒರಿಯೂರು ರಾಘವೇಂದ್ರ

ವಿದ್ಯಾರ್ಥಿಗಳೆಲ್ಲ ಸಮಾರಂಭದಲ್ಲಿ ಪಾಲುಗೊಂಡಿದ್ದರು. ಬೀಳ್ಕೊಡುಗೆಯ ಕೂಟ ಅದಾಗಿತ್ತು. ಒಬ್ಬ ಉಪಾಧ್ಯಾಯರಂತೂ ಅದೇಕೋ ಗಳಗಳನೆ ಅತ್ತೇ ಬಿಟ್ಟರು. ಹುಡುಗರಿಗೆ ಹೇಗಾಗಿರಬೇಡ ? ಅವರೆಲ್ಲರೂ ನಕ್ಕರು ಅಷ್ಟೆ. ಬಹುಶಃ ಅವರಿಗೆ ಅಳಿಸುವುದು ಮಾತ್ರ ಗೊತ್ತು. ಭಾಷಣಗಳೂ ನಡೆಯಿತು. ಆಗ ಮತ್ತೊಬ್ಬ ಮಾಸ್ತರು ಕೇಳಿದರು.

'ಶಾಲೆ ಬಿಡುತ್ತಿರುವ ಈ ಸಮಯದಲ್ಲಿ ನಿನ್ನ ಗುರಿ ಏನು ?' ಉತ್ತರ ಹಲವಾರು. ಆದರೆ ಪ್ರಶ್ನೆಯೊಂದೇ.

‘ಡಾಕ್ಟರಾಗಬೇಕು’

‘ಇಂಜಿನಿಯರಾಗಬೇಕು’

‘ಪ್ರಧಾನಿಯಾಗಬೇಕು’

ಆದರೆ ಒಬ್ಬನೂ —

‘ಉಪಾಧ್ಯಾಯನಾಗಬೇಕು’

‘ಬಡ ಗುಮಾಸ್ತನಾಗಬೇಕು’ ಎನ್ನಲಿಲ್ಲ. ಎಲ್ಲ ಉಪಾಧ್ಯಾಯರೂ ಸಂತೋಷದಿಂದ ‘ಭೇಷ್’ ಎಂಬಂತೆ ತಲೆದೂಗಿದರು. ಅದೇ ಸಮಯದಲ್ಲಿ ಮೂಲೆಯಲ್ಲಿ ಕುಳಿತು ತೂಕಡಿಸುತ್ತಿದ್ದ ಮಂಕ ಅವರ ಕಣ್ಣಿಗೆ ಬಿದ್ದ. ಸಂತೋಷ ಕೂಟದಲ್ಲಿ ತೂಕಡಿಸುವುದೆಂದರೇನು ಅರ್ಥ ? ಅವನ ಕುಂಭಕರ್ಣನ ನಿದ್ದೆಗಡ್ಡ ಬಂದು, ಅವನನ್ನೆಬ್ಬಿಸಿ ಅದೇ ಪ್ರಶ್ನೆ ಕೇಳಿದರು. ಅವನಿಗೆ ಬಂದ ಸಿಟ್ಟಿನಲ್ಲಿ

‘ಅಪ್ಪನಾಗಬೇಕು’ ಎನ್ನಲಿಲ್ಲ, ಯೋಚಿಸಿ, ಯೋಚಿಸಿ ನುಡಿದ.

‘ಇದೇ ಶಾಲೆಯ ಉಪಾಧ್ಯಾಯನಾಗಬೇಕು’

ಭಲೇ ಮಂಕ ಭಲೇ ನಿನ್ನನ್ನು ಪಡೆದ ಈ ಶಾಲೆಯೇ ಧನ್ಯ. ಎಲ್ಲರಿಗೂ

ತಿಳಿಸು– ನೀನೇಕೆ ಇಲ್ಲಿ ಉಪಾಧ್ಯಾಯನಾಗಬಯಸುತ್ತೀಯೆಂದು ?' ಶಾಲೆಯ ಸರ್ಟಿಫಿಕೇಟ್‌ಗಳೆಲ್ಲ ಅವನ ಕೈ ಸೇರಿತ್ತಾದ್ದರಿಂದ ಅವನು ನಿರ್ಭಯನಾಗಿ ನುಡಿದ,

'ನಾನಿಲ್ಲಿಗೆ ಉಪಾಧ್ಯಾಯನಾಗಿ ಬರುವ ವೇಳೆಗೆ ನಿಮ್ಮ ಮಗನೂ ಇದೇ ಶಾಲೆಯಲ್ಲಿ ಓದುತ್ತಿರುತ್ತಾನೆ. ನನಗೆ ನೀವು ಕೊಟ್ಟಿರುವ ಪ್ರತಿಯೊಂದು ಏಟಿನ ಶಬ್ದವೂ ನೆನಪಿನಲ್ಲಿದೆ...

ಆಗ - ಈಗ

ಲಿಂಕ್ಸ್

ಆಗ

ಕುರುಬರ ಹುಡುಗನೊಬ್ಬ ಕಲ್ಲಿನ ರಾಶಿಯೊಂದರ ಮೇಲೆ ಕುಳಿತು ಊರಿನವರ ಕ್ಲಿಷ್ಟ ಸಮಸ್ಯೆಗಳನ್ನೆಲ್ಲಾ ನ್ಯಾಯ, ನೀತಿಯಿಂದ ತೀರ್ಪು ಕೊಟ್ಟು ಪರಿಹರಿಸುತ್ತಿದ್ದನಂತೆ, ಕಾಲಕ್ರಮದಲ್ಲಿ ಆ ಜಾಗವನ್ನು ಅಗೆಸಿ ನೋಡಲು ಅಲ್ಲಿ ರಾಜ ವಿಕ್ರಮಾದಿತ್ಯನ ಸಿಂಹಾಸನವು ಸಿಕ್ಕಿತಂತೆ.

ಈಗ

ಸೆಂಟ್ರಲ್ ಜೈಲ್ ಕಟ್ಟಡವನ್ನು ನಿರ್ನಾಮ ಮಾಡಿ ಅದಿರುವ ಸ್ಥಳದಲ್ಲಿ ಹೈಕೋರ್ಟ್ ಕಟ್ಟಡವನ್ನು ನಿರ್ಮಿಸುವ ಯೋಜನೆ ಇದೆಯಂತೆ. ಜಡ್ಜಿಯವರ ತೀರ್ಪುಗಳಲ್ಲಿ ಸ್ಥಳ ಮಹಾತ್ಮೆಯು ಸೋಂಕು ತಗುಲುವುದಿಲ್ಲವೆಂದು ನಂಬಬಹುದೇ!

ನೀರು, ನೀರು, ನೀರು


ವಿದೇಶಿ ವಿಸ್ಕಿ ಒಂದು ಬಾಟ್ಲು ಕೊಟ್ಟು ಒಂದು ಬಕೇಟ್ ನೀರು ತೊಂಡ್ಹೋದ್ರು
ನೀರಿನ ಸಮಸ್ಯೆ ಬಗ್ಗೆ ಹೇಳಲು ಸಚಿವರಿಗೆ ಮನವಿ ಸಿಕರಗದೆ ನೋಡು ಬಕೇಟುಗಳು ತುಂಬಿವೆ
ನೀರಿನ ಮಿತ ಬಳಕೆಗೋಸ್ಕರ ನಮ್ಮಜ್ಜ ಮೂರು ವಾರಕ್ಕೊಂದ್ಸರ ಸ್ನಾನ ಮಾಡ್ತಾಇದಾರೆ

ಕಾಶಿ ಕಥೆಗಳು

(ದೊಡ್ಡವರಿಗೆ) —

—ಶ್ಯಾಮಲ

ದಾವಣಗೆರೆಯ ದೊಡ್ಡರಾಮೇಗೌಡರು ಮೊನ್ನೆ ಕಾಶೀಗೆ ಹೋಗಿ ಬಂದರಂತೆ. ಊರಿನವರೆಲ್ಲರೂ "ಕಾಶಿಗೆ ಹೋಗಿ ಏನು ಬಿಟ್ಟುಬಂದಿರಿ ಗೌಡರೆ ? ಅಂತ ಕೇಳಿದ್ದಕ್ಕೆ ನನ್ನ ಮಗನನ್ನು ಬಿಟ್ಟುಬಂದೆ ಅಂತ ಗೌಡರು ಉತ್ತರ ಕೊಟ್ಟರಂತೆ. ಮಗನನ್ನು ಬಿಡೋ ಧಾರಳತನವನ್ನು. ಭಕ್ತಿಯನ್ನು ಕಂಡು ಎಲ್ಲರೂ ಆಶ್ಚರ್ಯ ಪಟ್ಟರಂತೆ. ಆಮೇಲೆ ತಿಳೀತಂತೆ ಇಷ್ಟು ದಿನ I. I. T. ಓದುತ್ತಿರುವ ಮದ್ರಾಸಿನಲ್ಲಿರುವ (ಯಾವಾಗಲೂ ಹೇಳುತ್ತಿದ್ದರೀತಿ !) ಮಗನಿಗೆ ಹತ್ತು ವರ್ಷದಿಂದಲೂ ಹುಚ್ಚು ಹಿಡಿದಿತ್ತು, ಕಾಶಿಗೆ ಹೋಗಿ ಇವನನ್ನೂ ಬಿಟ್ಟುಬಂದರೆ ಏನಾದರೂ ಒಂದು ಬಿಟ್ಟು ಬಂದ ಹಾಗೂ ಆಗುತ್ತೆ. ದಾವಣಗೆರೆಯಲ್ಲಿ ಇವನ ಪೀಡೆಯೂ ತಪ್ಪುತ್ತೆ ಅಂತ ಯೋಚಿಸಿ ಗೌಡರು ಅವರ ಮಗನನ್ನು ಕಾಶಿಯಲ್ಲಿ ಬಿಟ್ಟು ಬಂದ ಅವರ ಬುದ್ಧಿಶಕ್ತಿಯನ್ನು ದಾವಣಗೆರೆಯೇ ಪೊಗಳಿತಂತೆ.

ನಮ್ಮ ಚಂದ್ರವೇಣಿ ಕಥೆ ಗೊತ್ತೇನು ? ಅವಳು ಅವಳ ಕಾಲೇಜು ಟೂರಿನಲ್ಲಿ ಕಾಶಿಗೆ ಹೋಗಿಬಂದು ಮನೆಗೆ ಕಾಲಿಡುತ್ತಲೇ "ಕಾಶಿಗೆ ಹೋಗಿ ಸೀರೆ ಉಡುವುದನ್ನು ಬಿಟ್ಟೆ ಎಂದು ಘೋಷಿಸಿದಳಂತೆ. "ಇನ್ನೇನಮ್ಮಾ ಗತಿ ? ಅಂತ ಅವರಮ್ಮ ಮತ್ತು ಅಕ್ಕ ಪಕ್ಕದ ಹೆಂಗೆಳೆಯರೆಲ್ಲಾ ಪ್ರಶ್ನಿಸಿದಾಗ "ಸೀರೆ ಉಟ್ಟುಕೊಳ್ಳದಿದ್ರೆ ಏನಂತ್ರಿ ? ಮ್ಯಾಕ್ಸಿ, ಮಿಡಿ, ನಲ್ವಾರ್ ಕಮೀಜ್ ಇಲ್ಲವೆ ? ಆ ಗೊಡ್ಡು ಸೀರೆಗಳನ್ನು ಯಾರು ಸುತ್ತಿಕೊಳ್ಳುತ್ತಾರೆ ? ಅಂತ ಅಂದಳಂತೆ. ಅವಳಮ್ಮ ಕಾಶೀ ವಿಶ್ವೇಶ್ವರನೇ ಗತಿ ಅಂತ ನಿಟ್ಟುಸಿರು ಬಿಟ್ಟರಂತೆ,

ಹೋದ ವರ್ಷ ನಮ್ಮ ಮನೆ ಆಚೆ ಬೀದಿಯಲ್ಲಿ ಇರುವ ಗುಜರಾತಿ ಚಿನ್ನಭಾಯಿ ಪಟೇಲರು ಕಾಶಿಗೆ ಹೋಗಿ ಬಂದು ನಾನು ಇನ್ನು ಮೇಲಿಂದ ಸಿಹಿ ಪದಾರ್ಥವನ್ನೇ ತಿನ್ನುವುದಿಲ್ಲ—ಅದನ್ನು ಬಿಟ್ಟು ಬಂದಿದ್ದೇನೆ ಅಂತ ಹೇಳಿದರು. ಹುಟ್ಟಿದಾರಭ್ಯದಿಂದ ಉಸಿರಾಡುವುದಕ್ಕೆ ಗಾಳಿ ಇಲ್ಲದಿದ್ದರೂ, ತಿನ್ನೋದಕ್ಕೆ ಬೆಳಗ್ಗಿನಿಂದ ರಾತ್ರಿಯವರೆಗೂ ಸಿಹಿ ಪದಾರ್ಥಗಳು ಇದ್ದೇ ಇರಬೇಕು ಎಂದು ಹಟತೊಟ್ಟು ತಿನ್ನುತ್ತಿದ್ದ ಪಟೇಲರು ಇದೆಂತಹ ತ್ಯಾಗ ಮಾಡಿದ್ದಾರೆ ಅಂತ ಎಲ್ಲರ ಬಾಯಿಯಲ್ಲಿ ಕೇಳಿ ಬಂದ ಹೊಗಳಿಕೆ ! ಮೊನ್ನೆ ಮೊನ್ನೆ ಪಟೇಲರ ಹೆಂಡತಿ ಏನೋ ಮಾತನಾಡುತ್ತಿದ್ದಾಗ ನಮ್ಮ ಯಜಮಾನರಿಗೆ ಹೋದ ಒಂದುವರೆ ವರ್ಷದಿಂದ ತುಂಬಾ

'ಸಕ್ಕರೆ ರೋಗ' ಇದೆ ಅಂತ ಅತ್ತುಕೊಂಡಾಗ ಸುಮಾರು ಜನ "ಈಗ ಅರ್ಥ ವಾಯಿತು !" ಅಂತ ಕೂಗಿಕೊಂಡರಂತೆ.

ಮೈಸೂರಿನ ನಾಗಜ್ಜಿಯವರು ಕಾಶಿಗೆ ಹೋಗಿ "ಅಪ್ಪಾವಿಶ್ವೇಶ್ವರ, ಇನ್ನು ಮೇಲೆ ನಾನು ಚಕ್ಕುಲಿ, ಕೋಡುಬಳೆ ಮತ್ತು ಪುಳ್ಳಿಕಾಯಿ ಉಂಡೆ ಇವು ಮೂರನ್ನೂ ಬಿಟ್ಟಿದ್ದೀನಪ್ಪಾ, ನನ್ನ ಕಾಪಾಡಪ್ಪಾ ಅಂತ ಮೊರೆ ಇಟ್ಟರಂತೆ. ಅವರ ಪಕ್ಕದಲ್ಲಿ ಇದ್ದವರು ಅವರೂ ಮೈಸೂರಿನವರೇ– ಒಂದು ತಿಂಡಿ ಬಿಟ್ಟರೆ ಸಾಕು ನಾಗಜ್ಜಿ ಅಂತ ಹೇಳಿದ್ದಕ್ಕೆ "ಹೇಗಿದ್ದ್ರೂ ಹಲ್ಲುಗಳೆಲ್ಲಾ ಬಿದ್ದಾಯಿತು ಕಟ್ಟಿಸಿಕೊಳ್ಳುವುದಕ್ಕೂ ದುಡ್ಡಿಲ್ಲ, ಮೂರು ತಿಂಡಿಗಳನ್ನು ಬಿಟ್ಟರೆ ಜಾಸ್ತಿ ಪುಣ್ಯ ವಾದರೂ ಬರುತ್ತೆಬಿಡಿ" ಅಂತ ಯಾರಿಗೂ ಕೇಳದ ಹಾಗೆ ಪಕ್ಕದವರ ಕಿವಿಯಲ್ಲಿ ಉಸುರಿದರಂತೆ.

ನಮ್ಮ ಹೈಸ್ಕೂಲು ಹೆಡ್‌ಮಾಸ್ತರು ಸಂಕಪ್ಪನವರು ಮೊನ್ನೆ ಕಾಶಿಗೆ ಹೋಗಿ ಬಂದರು. "ಕಾಶೀಲಿ ನಾನು ತಲೆ ಚೌರ ಮಾಡಿಸಿಕೊಳ್ಳುವುದನ್ನೇ ಬಿಟ್ಟಿದ್ದೇನೆ ದೇವರೇ ಸಾಯೋತನಕ "ಅಂತ ಅಂದು ಕೊಂಡರಂತೆ" ತೀರಾ ತಲೆ ಚೌರನೇ ಬಿಟ್ಟು ಬಿಟ್ಟರೆ ನಿಮಗೆ ಮುಜುಗರವೇ ಆಗೋಲ್ಲವೆ ಮೇಷ್ಟರೆ ? " ಎಂದು ಅವರ ಹಿತೈಷಿಗಳು ಮೇಷ್ಟ್ರನ್ನು ಪ್ರಶ್ನಿಸಿದರಂತೆ. ಈ ತಲೆ ಇಟ್ಟುಕೊಂಡು ನನಗ್ಯಾಕೆ ಚೌರ ? ಎನ್ನುತ್ತಾ ಮೇಷ್ಟರು ತಮ್ಮ ತಲೆಯ ಮೇಲಿದ್ದ ಖಾದಿ ಟೋಪಿಯನ್ನು ತೆಗೆದಾಗ ಅವರ ಹಿತೈಷಿಗಳಿಗೆ ಕಾಣಿಸಿದ್ದು ಫಳ ಫಳ ಹೊಳೆಯುತ್ತಿದ್ದ ಬೊಕ್ಕ ತಲೆ !

ಮಲ್ಲೇಶ್ವರದ ಶಂಕ್ರಮ್ಮನವರು ಕಾಶಿಗೆ ಹೋಗಿ ಬಂದು "ಕಾಶಿಯಲ್ಲಿ ನನ್ನ ಹೊಸಾ ಚಪ್ಪಲಿಯನ್ನೇ ಬಿಟ್ಟು ಬಂದೆ," ಎಂದು ಹೇಳಿದಾಗ ಅವರ ಜೊತೆಯವರು ಇದೇನು ಶಂಕ್ರಮ್ಮಾ ಅಂಥಾ ಬಣ್ಣಗಳಲ್ಲಿ ಹಾಗೆ ಮಿನುಗುತ್ತಿದ್ದ ಚಪ್ಪಲಿಗಳನ್ನು ಬಿಟ್ಟರಲ್ಲಾ ಎಂದು ಉದ್ಗರಿಸಿದರು. ಅದಕ್ಕೆ ಶಂಕ್ರಮ್ಮನವರು ನಕ್ಕು, ಅಯ್ಯೋ ! ಹೋಗಲಿ ಬಿಡಿ, ರಾಮ ಮಂದಿರದಲ್ಲಿ ಹರಿಕಥೆಗೆ ಹೋಗಿದ್ದಾಗ ಒಂದು ದಿವಸ ಮರೆತು ಯಾರದ್ದೋ ಹಾಕಿಕೊಂಡು ಬಂದಿದ್ದೆ ನಾನು. ಕಳೆದುಕೊಂಡು ಬಂದದ್ದು ಅವರ ಪಾಪ. ನನಗೆ ಸಿಕ್ಕಿ ಕಾಶಿಯಲ್ಲಿ ಬಿಟ್ಟದ್ದು ನನ್ನ ಪುಣ್ಯ ಅಂತ ಸಮಾಧಾನ ಹೇಳಿದರಂತೆ,

ಅಂದಹಾಗೆ-ತುಮಕೂರಿ ಸಾಂಬಶಿವ ಅಯ್ಯರ್ ಕಾಶಿಗೆ ಹೋಗಿ—ಹಾರ್ಟ್ ಅಟ್ಯಾಕ್ ಆಗಿ ಪ್ರಾಣವನ್ನೇ ಬಿಟ್ಟರಂತೆ.

'ರಾಜೋಸ್ತವ ವರದಿ'

— ಚನ್ನಗಿರಿಸುಧೀಂದ್ರ

ನವೆಂಬರ್ 23 ದೊಡ್ಡಹುಲಿಕೆರೆ, ಅರ್ಥಾತ್ ಹುಲಿಪುರದ ಸಾಹಿತ್ಯ ಶರಬತ್ತು ಮಿಕ್ಕ ಸಂಘ ಸಂಸ್ಥೆಗಳೊಂದಿಗೆ ಹೆಣಗಾಡಿ ರಾಜ್ಯೋತ್ಸವ ಆಚರಿಸಿತು, ಕ್ಷಮ್ಸಿ, ಈ ಉಸ್ತವ ಮತ್ತೊ_ಮ್ಮೆ ಕ್ಷಮ್ಸಿ,... ಉತ್ಸವ ನಡೆಸಲಿಕ್ಕೆ 'ಸಹಕಾರ' ಎನ್ನವ ಜಾಗದಲ್ಲಿ 'ಹೆಣಗಾಡಿ' ಎಂಬ ಪದ ಯಾಕೆ ನುಸುಳಿತು ಎಂಬುದು ಪ್ರತಿಯೊಬ್ಬ ಭಾಷಾಭಿಮಾನಿಯೂ, ಕನ್ನಡದ ಉಟ್ಟು ಓರಾಟಗಾರರೂ ಊಟ ನಿದ್ದೆ ಬಿಟ್ಟು ಯೋಚಿಸಬೇಕಾದ ವಿಷಯವೇ. ಕಾಲೇಶಿ ಎಂಬ ಮುಕ್ಕಾಲು ಕನ್ನಡ ಪ್ರೇಮಿಯು 'ಸಂಗ' ಪೋದಃ ದೊಡ್ಡ 'ಟೈಗರ್' ಪುರದಲ್ಲಿ ತಲೆಕೊಡವಿ, ಗುಟುರಿ ಪಂಜಪಾಡಿಸಿದೆ ಎಂಬ ಸುದ್ದಿಯನ್ನ. ನಿಮಗೆ ನಾನು ಸತ್ಯವನ್ನೂ ಪ್ರಿಯವಾಗಿ ಹೇಳಬೇಕೆಂಬ ವಿವೇಕದಿಂದ ಕೊರೆಯುತ್ತಿದ್ದೇನೆ, ಆ 'ಸಂಗ'ದ 'ಹೆಸರು' ಏನೆಂದು ನಿಮಗೀಗಲೇ 'ಪೊಳೆದಿರಬಹುದು' ಅದೇ Jazz ಅಭಿಮಾನಿಗಳ ಸಂಗ. ಇದೇ ಧ್ವನಿಯುನ್ನು ಸಹಜವಾಗಿ ನೆನಪಿಗೆ ಬರುವ ಇನ್ನೊಂದು ಸಂಘಕ್ಕೂ ಇದಕ್ಕೂ ಸಂಬಂಧವೇ ಇಲ್ಲ ಎಂಬ ಸತ್ಯವನ್ನೂ ನಮ್ರವಾಗಿ ನಿಮಗೆ ಹೇಳ ಬಯಸುವೆ. ಶಾಂತಂ ಪಾಪಂ ಅವೇ ಬೇರೆ, ಇದೇ ಬೇರೆ, ದಯವಿಟ್ಟು ಭಿನ್ನತೆಯಲ್ಲಿ ಏಕತೆಯನ್ನ ಸಂಶೋಧಿಸಬೇಡಿ, ಜ್ಹಾಜ್ ಅಭಿಮಾನಿಗಳ ಸಂಗ. ಇಲ್ಲಿ ಸಂಘ ಎಂಬ ಪದದಲ್ಲಿರುವ 'ಗ' ಕ್ಕೂ ಇರಬೇಕಾದ 'ಘ'ಕ್ಕೂ ದಯವಿಟ್ಟು ವಿವಾದ ತರಬೇಡಿ ಅಲ್ಪಪ್ರಾಣ, ಮಹಾಪ್ರಾಣ ಉಚ್ಚಾರಣೆಯ ಬಗ್ಗೆ ಚರ್ಚೆನ ಹೊರಟರೆ ಬಹಿರಂಗವಾಗಿ ನಿಮ್ಮ 'ಪ್ರಾಣ'ಕ್ಕೇ ಸಂಚಕಾರವೊದಗಬಹುದು.

'ಸಕಲ ಭೂತಂಗಳೊಳನುಕಂಪೆ' ತೋರುವುದು ನನ್ನಗುರಿ, ಉಚ್ಚಾರಣೆ ಬಗ್ಗೆ ಅತಿರಥ ಮಹಾರಥರು ಚಿಂತಿಸಿ, ಸೋತುಸುಣ್ಣವಾಗಿದ್ದಾರೆ. ಆದ ರಿಂದ ಉಳಿದಿರುವುದು ಗೋಡೆಯುಮಣ್ಣು.

ಮತ್ತೆ ಕಾಲೇಶಿಯ ಮುಕ್ಕಾಲು ಕನ್ನಡ ಪ್ರೇಮದ ಬಗ್ಗೆ ಬರೋಣ, ಬರೋಣ ಎಂದರೆ ಏನ್ಸ್ವಾಮಿ ಇದು ಅಜ್ಜಿಕತೆಯೇ?.... ಉಸಾರ್ ಕಾಲ್ನಾಗಿನವ್ರು ಕೈಯಾಗ ಬಂದಾವ್ರ? ಕ್ಷಮ್ಸಿ, ಇದೂ ಕೂಡ ಅವನ ಕನ್ನಡಪ್ರೇಮ 'ಹುಕ್ಕಿ ಅರಿದಾಗ' ಬರುವ ಅಣಿಮುತ್ತು,

ದೊಡ್ಡಪುಲಿಕೆರೆಯಲ್ಲಿ ಅಂದು ಭಾರಿ ಸಂಭ್ರಮ. ಪುಲಿಕೆರೆ ಅಂತ ಯಾಕೆ ಕರೆದರು ಎನ್ನುವುದು ಸಸ್ಪೆನ್ಸ್ ಆಗಿಯೇ ಇರಲಿ, 'ಕಾಲುಕೆರೆ' ಅಂತಲೂ ಇಟ್ಟು ಕೊಳ್ಳಬಹುದು.

ಇನ್ನೇನು ರಾಜ್ಯೋತ್ಸವ ಸಮಾರಂಭ ಶುರು. ನಾಡಗೀತೆ ಹಾಡಬೇಕು ! ಕಾಲೇಶಿ ಪ್ರತ್ಯಕ್ಷ. ಹಾಗಂತ ಸಿಂಪಲ್ಲಾಗಿ ಸುಮ್ಮನಾಗಬೇಡಿ. ನಾಡಗೀತೆ ಹಾಡಲಿ ಕ್ಕೆಂದು ಅವ ಬರಲಿಲ್ಲ ಕಂಬದಿಂವ ನರಸಿಂಹ ಬರಲಿಲ್ಲವೆ ? ಅದಕ್ಕಿಂತಲೂ ಒಂದು ಗುಂಜು ಹೆಚ್ಚು.

ಮುಂದೆ ನಡೆದ ಕಥಾನಕದ ಯಥಾನಕಲು....

'ಯಾರಯ್ಯ ಅದು ಸಂಚಾಲ್ಕ ?'

'ನಾನೇ, ನಾನೇ, ಏನಾಗಬೇಕಿತ್ತು ?

'ಪ್ರಶ್ನೆ ಅದಾವೆ ಉತ್ರ ಬೇಕು !' (ರೊಕ್ಕ ಐತೆ ಮಾಲು ಕೊಡು ಎಂಬ ಧ್ವನಿ)

ಆಗ ಸಂಜೆ 6-05. ಕಾರ್ಯಕ್ರಮ IST ಪ್ರಕಾರ 6ಕ್ಕೆ ಶುರುವಾಗಬೇಕಿತ್ತು,

'ನೋಡು ಪ್ರೋಗ್ರಾಂ, ಶುರುವಾಗಬೇಕು, ಸಮಯವಿಲ್ಲ ಆ ಮೇಲೆ ಮಾತಾಡೋಣ'

'ಸಾದ್ಯವಿಲ್ಲ ಉತ್ರಕೊಟ್ಟು ಕಾರ್ಯಕ್ರಮ ಶುರುಮಾಡು....

'ಸರಿ... ಏನಪಾ.... ನಿಂದು.... ಪ್ರಶ್ನೆ....

ಇದೇನಿದು?'

'ಎಲ್ಲೈತೆ?"

'ಕೈಯಾಗಿದೆ ನೋಡು'

'ಕಾರ್ಯಕ್ರಮದ ಇನ್ವಿಟೇಷನ್ನು !'

'ಅದ್ರಾಗೇನೈತೆ ?'

'ನೀನೇ ಓದು...

'ಕಾಟ್ ಬಂಕ್ ಕನ್ನಡಬಳ್ಗ, ಸಾಯಿತ್ಯ ಶರಬತ್ತು ಮತ್ತು ಸಂಕೃತಿ ಯಿಲಾಕೆ' (ಉದ್ಧಾರವಾಯಿತು ಕನ್ನಡ ಭಾಷೆ).

'ಏನಾಯ್ತಪ್ಪಾ ?' (ಸಂಚಾಲಕರಿಗೆ ಕಾರ್ಯಕ್ರಮ ತಡವಾಗುತ್ತಿರುವ ಆತಂಕ).

'ಥತ್‌ರಿ .... ಯೇನಾಗೈತಿ .... ಪ್ರಶ್ನೆ .... ಭಂದು ಶರಬತ್ತಿನ ಯೆಸ್ರು ಯಾಕೆ ಕೇಳಾಕೆ ಬಂತು ? (ಆಹಾ ಸಂಸ್ಥೆಯ ಬಗ್ಗೆ ಎಂತಹ ಕಾಳಜಿ !)

'ನೀನ್ಯಾರು ಅದನ್ನ ಕೇಳದಕ್ಕೆ ? (ಸಂಚಾಲಕರ ಸ್ವರ, ಯಾರದ್ದೂ ಸಪೋರ್ಟಿಲ್ಲ). ಕಾಲೇಶಿ ನಿರುತ್ತರ. ಚಡಪಡಿಸಿದ. 'ಹುಕ್ಕುವ' ನದಿ ಸಂದಿ ಹುಡುಕುತ್ತದೆ.

'ನೀವು ಶರಬತ್ತಿನೋರು .... ಸಾವಿರಾರು ರೂಪ್ಯಾ ಆಳ್ ಮಾಡ್ತೀರಿ !' (ಇದ್ಯಾವುದಕ್ಕೆ ಪೀಠಿಕೆಯೋ ಗೊತ್ತಿಲ್ಲ)

ಸಂಚಾಲಕರು ಕಾರ್ಯಕ್ರಮ ಶುರುಮಾಡಲು ಹೇಳದರು.

'ಅದೆಂಗೆ ಶುರು ಮಾಡ್ತೀರಿ...ಅದೆಂಗೆ ನಾನೂ ನೋಡ್ತೀನಿ !

'ಅದೆಂಗೆ ಅಂದ್ರೆ ! ಸಂಚಾಲಕರು ಸಮಾರಂಭದ ಅಧ್ಯಕ್ಷರನ್ನು ಶರಬತ್ತಿನ ಅಧ್ಯಕ್ಷರನ್ನೂ ವೇದಿಕೆಗೆ ಕರೆದರು.

'ಯಾವನೂ ಬರಕೂಡದು ವೇದಿಕೆಗೆ' ಕಾಲೇಶಿ ಅರಚಿದ. ಹುಲ್ಲೇಶಪ್ಪ ಹೆದರಿದರು. ಕ್ಷಮ್ಸಿ, ಅವರನ್ನ ಪರಿಚಯ ಮಾಡಿಕೊಡದ್ದಕ್ಕೆ. ಏಕೆಂದರೆ ಮಾತಿಗೆ ನಿಂತರೆ ಅವರಿಗೆ ಅವರೇ ಪರಿಚಯಗೊಳ್ಳುತ್ತಾರೆ. ಅವರು ಹುಲ್ಲಿನ ಕಡ್ಡಿಯ ಹಾಗೆ ನಡುಗುತ್ತಿದ್ದರು ಹುಲಿಗೆ ಬೆದರಿದ ಹುಲ್ಲೆಯಂತೆ.

'ಏನಪ್ಪಾ .... ನಿನ್ನದು ಮತ್ತೆ ಪ್ರಶ್ನೆ, ಅವೆನ್ನೆಲ್ಲಾ ಪಟ್ಟಿ ಮಾಡಿಕೊ .... ನಿಧಾನವಾಗಿ ಕೂತು ಮಾತಾಡೋಣ.... ಸಂಚಾಲಕರ ಸಮಾಧಾನ ಸಾರೋದ್ಧಾರ ನಡದೇ ಇತ್ತು. ಬಂದ ಅತಿಥಿಗಳೆದರು ಜಾಜಿನ ಅಭಿಮಾನಿಗಳು ಮಾನ ಕಳೀತಾ ಇದಾರಲ್ಲ ...

'ಬೇಕಾಗಿಲ್ಲ ಈಗ್ಲೆ ಉತ್ರ ಕೊಡು.... ಬಾಲಕ ರಾಮು, ಆಕಾಶದ ಚಂದ್ರ ನನ್ನು ಕೇಳಿ ಮೊಂಡು ಹಿಡಿದಂತೆ.

ಶರಬತ್ತು ಬೇರೆ ಸಂಗ ಸೇರ್ದೆ ಸ್ವತಂತ್ರ ಕಾರ್ಯಕ್ರಮ ಮಾಡ್ಬೇಕು, ಅವನ 'ಲಾ' ಪ್ಯಾಂಟ್.

'ಹಾಗಂತ ಕಾನೂನಿದ್ಯಾ ಸಂಚಾಲಕರ ಕಳಕಳಿಯ ಮಾತು,

ಕಾಲೇಶಿ ನಿರುತ್ತರ. ಚಡಪಡಿಸಿದ ಪ್ರಶ್ನೆಗಳಿಗೆ. ಮತ್ತೊಂದು ಸಹಪ್ರಸಾರ ಕೇಂದ್ರ ಹೊತ್ತಿತು. ಹೊಗೆಯುಗುಳುತ್ತ 'ಉತ್ರಕೊಟ್ಟು ಮುಂದೆ ಹೋಗು... ನಮ್ಮನ್ ಕ್ಯೇಳ್ದೆ ಹೆಂಗೆ ಮಾಡಿದೆ !

—ರಾಜ್ಯೋತ್ಸವಾನಾ ?' ಹುಲಿಕೆರೆಯ ಪಾಳೆಗಾರಿಕೆ ಮಾತು.

'ನೀನ್ಯಾರು ಕೇಳದಿಕ್ಕೆ ?

ಚೇಲಾ ನಿರುತ್ತರ. ಕಾಲೇಶಿಯ ಬಲಕ್ಕೆ ಸೋಲು. ಮತ್ತೂ ಚಡಪಡಿಸಿದ,

'ನಮ್ಗೆ ಸರಿಯಾದ ಉತ್ರ ಸಿಕ್ಕಿಲ್ಲ ಕ್ಷಮಾಪಣೆ ಕೇಳಬೇಕು !'—ಕಾಲೇಶಿ.

ಸಂಚಾಲಕರು ವೇದಿಕೆ ಬಳಿ ನಡೆದರು. ಕಾಲೇಶಿ, ಚೇಲಾನೊಂದಿಗೆ ಮುಂದಿನ ಸಾಲಿನಲ್ಲೇ ಕುಳಿತ, ಅತಿಥಿಗಳು ಸಂಚಾಲಕರ ಮುಖ ನೋಡಿದರು, ಸಂಚಾಲ ಕರು ಅತಿಥಿಗಳ ಮುಖ ನೋಡಿದರು. ಶರಬತ್ತಿನ ಅಧ್ಯಕ್ಷರು ಸಂಚಾಲಕರನ್ನು ಶಪಿಸಿದರು. 'ರವಿಸುತನ ಕಿವಿಯಲಿ ಬಿತ್ತಿದನು ಭಯವ' ಎಂಬಂತೆ ಸಂಚಾಲಕರಿಗೆ ಕೇಳಿಬಿಡಪ್ಪ ಕ್ಷಮಾಪಣೆ. ಸಸಿ ನೆಟ್ಟು ಬೆಳಸಬೇಕು... ಎಂದು ಶರಬತ್ತಿನ ಅಧ್ಯಕ್ಷ ಹುಲ್ಲೇಶಪ್ಪ ಬೆನ್ನಹಿಂದೆ ಪಿಸುನುಡಿದರು.

ಸಸಿ, ಬೆಳೆಸುವುದು .... ಸಂಚಾಲಕರಿಗೆ ಅರ್ಥವೇ ಆಗಲಿಲ್ಲ. ರಾಘಣ್ಣನ ಹೋಟೆಲ ಗ್ರೈಂಡರಿನ ಒಳಗಿನ ಕೊಬ್ಬರಿಯ ಚೂರಾದ. ಅತ್ತ ಅತಿಥಿಗಳು ಇತ್ತ ಅಧ್ಯಕ್ಷರು ಸುತ್ತ ಜಾಜ್ ಅಭಿಮಾನಿಗಳ ಗ್ರಹಕೂಟ,' ಮತ್ತೊಂದೆಡೆ ಸಹಕಾರಕ್ಕೆ ಬಂದ ಬಳಗದವರು....ಆಗ ಸಂಜೆ 6–35.

'ಸ್ನೇಹಿತರೆ....ನಾವು ಕ್ಷಮಾಪಣೆ ಅಂತೂ ಕೇಳಲೇ ಬೇಕು. ಯಾಕಂದ್ರೆ ಕಾರ್ಯಕ್ರಮವನ್ನ ತಡವಾಗಿ ಆರಂಭಿಸುತ್ತಿದ್ದೇವೆ. ಸಭೆ–ಸಮಾರಂಭ ನಡೆಸ

ಬೇಕಾದ್ರೆ ತಪ್ಪುಗಳಾಗುವುದು ಸಹಜ. ಸಂಘ ಸಂಸ್ಥೆಗಳು ಬಂದು ಕೇಳಿದಾಗ ಸೇರಿಸಿಕೊಳ್ತೀವೆ... ಇನ್ನೂ ಏನೇನೋ ಹೇಳಿದರು.

ಅಷ್ಟರಲ್ಲಿ—ಏನು ಅಷ್ಟರಲ್ಲಿ! ಕಾಲೇಶಿಯ ಎಣ್ಣೆ ಜಿಡ್ಡು ಇಳಿದಿತ್ತು. ಕ್ಷಮ್ಸಿ, ಅವನು ಬರುವ ಮುಂಚೆಯೇ ಎಣ್ಣೆಧಾರಿಯಾಗಿ ಬಂದಿದ್ದ ಎಂಬುದು ತಿಳಿಸಲು ನಮಗೂ ಗೊತ್ತಿರಲಿಲ್ಲ. ಚೆನ್ನಾಗಿದೆ! ಅಕಾಲ ನೋಡೋಕೆ ನೂಕು ನುಗ್ಲೆ? ಹ್ಯಾಲಿ ಧೂಮಕೇತುವನ್ನು ಜನ ಹೆಂಗೆ ನೋಡಿದ್ರು ನಮಗೆ ತಿಳಿಸದ ಹಾಗೆ? ಕ್ಷಮಾಪಣೆ ಕೇಳಬೇಕು.... ಎಂದಂತೆ. ಯಾರು, ಯಾರಿಗೆ, ಏತಕ್ಕೆ ಕ್ಷಮಾಪಣೆ ಕೇಳಬೇಕು....ಈ ವಿಷಯ So called Educated ಜನವೃಂದಕ್ಕೆ ಬಿಡಿಸದ ಒಗಟಾಯ್ತು. ಜಾಜ್ ಅಭಿಮಾನಿಗಳ ಗಾಜು, ಕಲ್ಲುಗಳ ಮಹತ್ವ ಎಂಥವರನ್ನೂ ಕ್ಷಮೆ ಕೇಳುವಂತೆ 'ಬ್ಲಾಕ್‌ಮೈಲ್' ಮಾಡುತ್ತದೆಂಬುದು ಸತ್ಯ. ಸತ್ಯದಷ್ಟೇ ಅಪ್ರಿಯ.

ಹುಲಿಕೆರೆಯ ಹುಲಿಗಳೆಲ್ಲ ಇಲಿಗಳಾದರು, ನಿಟ್ಟುಸಿರು ಬಿಟ್ಟರು. ನಾಡಗೀತೆಯು ಬರ್ಮಾಲ ಅವರ ಕೋಗಿಲೆಕಂಠದಿಂದ, ನಡುಗುತ್ತ ಹೊರಬಂದು ಘಟ್ಟಿಯಾಗಿತ್ತು. ಶರಬತ್ತಿನ ಅಧ್ಯಕ್ಷರು ಕ್ಷಮಾಪಣೆ ರಿಪೀಟ್ ಮಾಡುತ್ತಿದ್ದರು, ಅವರು ಕಾಲೇಶಿಯ ಪೂರ್ವಾಶ್ರಮದ ಗುರುಗಳು, ರಾತ್ರಿ ಕ್ಷೇಮವಾಗಿ ಮನೆ ಸೇರಬೇಕೆಂಬ ತವಕ, ಅವರು ಮಾತಿನಲ್ಲಿ ಬಳಸಿದ ಪದ, ಪ್ರತಿಮೆಗಳಿಂದ ತಿಳಿದವು, ಕಡೆಗೆ ನಾಟಕ ಪ್ರದರ್ಶನವೂ ನಡೆಯಿತು. ಅಲಲ್ಲಿ ಕಾಲೇಶಿಯ ಬಾಯಿಂದ ಹೊರಟ ಸಂಸ್ಕೃತ ಪದಪುಂಜಗಳ ಹಾರಾಟ ಬಿಟ್ಟರೆ ಮತ್ತೆಲ್ಲವೂ ಶಾಂತ, ಏಕೆಂದರೆ ನಾಟಕ ಮುಗಿದಾಗ ಬೆಳಗಿನ ಜಾವ 2–30, ಬಯಲು ರಂಗಮಂದಿರದ ಸುತ್ತ ಮುತ್ತ ಒಂದು ಕಲ್ಲೂ ಬಿಡದಂತೆ ಚೊಕ್ಕಟಮಾಡಿದ ಪುರಸಭೆಯವರಿಗೆ 'ವಂದನಾರ್ಪಣೆ' ಹೇಳುವಲ್ಲಿ ಮರೆತ ಬಗ್ಗೆ ಸಂಚಾಲಕ ಮಹಾಶಯ ಬಹಳ ನೊಂದುಕೊಂಡರು.

ಸಬ್ಸಿಡಿ ಧರ್ಮ

—ಸೋಮಿ

ಧರ್ಮಕ್ಕೆ ಮಾನವೀ ಧರ್ಮಕ್ಕೆ
ಧರ್ಮಕ್ಕೆ
ಜಯವಾಗಲಿ ಜಯವಾಗಲಿ
ಕಾರುಣ್ಯ. ಮೈತ್ರಿ ಶಾಂತಿಯ ಮಂತ್ರ
ಎಲ್ಲಕ್ಕು
ಜಯವಾಗಲಿ ಜಯವಾಗಲಿ
ಬೌದ್ಧ ಷಿಂಟೋ ಬಹಾಯೀ
ಕ್ರೈಸ್ತ ಇಸ್ಲಾಮು
ಧರ್ಮಕ್ಕೆ ಧರ್ಮಕ್ಕೆ ಜಯವಾಗಲಿ
ಯಾರು ಬೇಡೆಂದವರು
ಜಯವಾಗಲಿ
ಇರುವುದೊಂದೇ ಧರ್ಮ ಗತಿಶೀಲ ಕರ್ಮ
ರೊಕ್ಕ ಹರಿಯುವ ತನಕ
ಸಬ್ಸಿಡಿಯು ದೊರೆವತನಕ
ಎಲ್ಲಿಂದ ಹರಿಯುವುದೋ
ಅಲ್ಲಿಗೇ ಅಲ್ಲಿಗೇ ಜಯವಾಗಲಿ
ಹೇಳಿಕೊಡುವವರಾರೋ
ಅವರಿಗೇ ಅವರಿಗೇ
ಜಯವಾಗಲಿ ಜಯವಾಗಲಿ

25

ಇಂತಹ "ರನ್ ಔಟ್" ಕೇಳಿದ್ದೀರಾ

ಡಾ॥ ಎಸ್. ಕೃಷ್ಣಮೂರ್ತಿ

ವೇಣು ಹಾಗೂ ಬದರೀ ಇಬ್ಬರೂ ನಮ್ಮ ಕ್ರಿಕೆಟ್ ಟೀಮಿನ ಆಟಗಾರರು. ವೇಣು ಟೀಮಿನ ಫಾಸ್ಟ್ ಬೌಲರ್ ಆರು ಅಡಿ ಎತ್ತರದ 110 ಕೆ. ಜಿ. ತೂಕದ ಅಪ್ಪಟ ಕೃಷ್ಣವರ್ಣದ ದೈತ್ಯ. ಬದರೀ 5ಅಡಿ ಇದ್ದರೂ 100 ಕೆ. ಜಿ. ಇದ್ದ, ಸೌಮ್ಯ ಸ್ವಭಾವದ ಸ್ಲೋ ಬೌಲರ್. ವೇಣು, ಬದರಿಗಿಂತ ತದ್ವಿರುದ್ಧ ಸ್ವಭಾವದ ಕ್ರಿಕೆಟ್ ಆಟಗಾರರು ಒಂದೇ ಟೀಮಿನಲ್ಲಿ ಸಿಕ್ಕುವುದು ಅಪರೂಪ.

ವೇಣುವಿನ ಆರಾಧ್ಯ ದೈವ "ಡಾ: ಎಂ. ಜಿ. ಆರ್. ಕ್ರಿಕೆಟ್ ಮ್ಯಾಚಿಗೆ ಬರುವ ಮೊನ್ನ 'ಎಂ. ಜಿ. ಅರ್. ಫೋಟೋಗೆ ನಮಸ್ಕಾರ ಮಾಡಿ ವಿಭೂತಿ ಹಚ್ಚಿಕೊಂಡು ಬರುತ್ತಿದ್ದ. ಬರುತ್ತಿದ್ದಂತೆಯೇ ಮೈದಾನದ ಸುತ್ತ ಒಂದು ರೌಂಡ್ ಹಾಕಿ ಅಲ್ಲಿದ್ದ ಎಲ್ಲಾ ನೌಕರರುಗಳನ್ನೂ ಲೀಲಾಜಾಲವಾಗಿ ಬೈಯುತ್ತಿದ್ದ. ದಿನಾ ಮಾಂಸ ಕೋರುತ್ತಿದ್ದ ಅವನ ಹೊಟ್ಟೆ ಒಂದು ಪುಟ್ಟ ಗುಡಾಣದಂತಿತ್ತು. ಮನೆಯಿಂದಲೇ ಕ್ರಿಕೆಟ್ ಶೂ ಧರಿಸಿ ಬರುತ್ತಿದ್ದ, ನಂತರ ಮನೆಗೆ ಹೋಗಿ ಬಿಚ್ಚುತ್ತಿದ್ದ. ಅವನ ಆಪ್ತ ಸ್ನೇಹಿತರ ಪ್ರಕಾರ ವೇಣುವಿಗೆ ಬಗ್ಗಿ ಶೂಸ್ ಕಟ್ಟಿಕೊಳ್ಳಲು ಅವನ ಹೊಟ್ಟೆ ಅಡ್ಡ ಬರುತ್ತಿತ್ತು. ಅವನ ಮಗಳ ಕೈಯಲ್ಲಿ ಶೂ ಲೇಸ್ ಕಟ್ಟಿಸಿಕೊಂಡು ಬಂದು ಬಿಡುತ್ತಿದ್ದ. ಮತ್ತೆ ಸಾಯಂಕಾಲ ಮಗಳೋ, ಹೆಂಡತಿಯೋ ಶೂ ಬಿಚ್ಚುತ್ತಿದ್ದರು. ಹಾಗಂತೇನೂ ಅವನು ಹೆಂಡತಿ ಮಕ್ಕಳನ್ನು ವಿಶ್ವಾಸದಿಂದ ಮಾತನಾಡಿಸುತ್ತಿದ್ದ ಅಂತ ಅರ್ಥವಲ್ಲ. ಯಾವ ಅಹಾರದ ಪ್ರಭಾವವೋ ಏನೋ ಅವನ ಬಾಯಿಯಲ್ಲಿ ಹೊಲಸು ಮಾತುಗಳು ನಿರರ್ಗಳವಾಗಿ ಹೊರಹೊಮ್ಮುತ್ತಿದ್ದವು. ಹೆಂಡತಿ, ಮಕ್ಕಳು, ಮೈದಾನದ ನೌಕರರು, ಅವನ ಜೊತೆಯ ಆಟಗಾರರು, ಎದುರಾಳಿ ಬ್ಯಾಟ್ಸ್‌ಮನ್‌ಗಳೂ ಕಡೆಗೆ ಅಂಪೈರುಗಳೂ ಅವನ ಬಾಯಿಗೆ ಹೆದರುತ್ತಿದ್ದರು.

ಇದಕ್ಕೆ ವಿರುದ್ಧವಾಗಿದ್ದ ಬದರೀ, ಅತ್ಯಂತ ಸೌಮ್ಯ ಸ್ವಭಾದದವನು. ಎಲ್ಲಾ ಆಟಗಾರರನ್ನೂ ತನ್ನ ಕಾರಿನಲ್ಲಿ ಕೂಡಿಸಿಕೊಂಡು ಎಲ್ಲರಿಗೂ ಬೆಳಿಗ್ಗೆ ಇಡ್ಲಿ ವಡೆ ತಿನ್ನಿಸಿಕೊಂಡು "ಕ್ರಿಕೆಟ್ ಕಿಟ್" ಹೊತ್ತುಕೊಂಡು ಬರುತ್ತಿದ್ದ.

ಮೈದಾನದಲ್ಲಿ ಪಿಚ್‌ರೋಲ್ ಮಾಡುವುದಕ್ಕೆ ಅಥವಾ ಮ್ಯಾಟ್ ಹಾಸುವುದಕ್ಕೂ ಹಿಂದೆಗೆಯುದ ವ್ಯಕ್ತಿ. ಗಟ್ಟಿಯಾಗಿ ಮಾತನಾಡಿದರೆ ಯಾರಾದರೂ ಬೆಚ್ಚಿ ಬಿದುತ್ತಾರೋ ಎಂದು ಮೆತ್ತಗೆ ಮಾತನಾಡುವ ಸ್ವಭಾವ ಬದರಿಯುದು. ಸ್ವಭಾವಕ್ಕೆ ತಕ್ಕಂತೆಯೇ ಬದರೀ ಟೀಮಿನ ಸ್ಲೋ ಬೌಲರ್. ಅವನ ಸ್ಲೋ ಬೌಲಿಂಗ್ ಎಷ್ಟು "ಸ್ಲೋ" ಆಗಿತ್ತೆಂದರೆ, ಆಕಸ್ಮಾತ್ ಅವನೇನಾದರೂ ಫೈಡ್ ಬಾಲ್ ಮಾಡಿದರೆ, ಅವನೇ ತಕ್ಷಣ ಓಡಿಹೋಗಿ ಚೆಂಡು ಬ್ಯಾಟ್ಸ್‌ಮನ್ ತಲುಪುವುದರಲ್ಲಿ ಹಿಡಿದುಕೊಳ್ಳಬಹುದಾಗಿತ್ತು.


ವೇಣು ಆಡಿದ ಪ್ರತಿಯೊಂದು ಮ್ಯಾಚಿನಲ್ಲೂ ಬದರಿಯನ್ನು ತಪ್ಪದೇ ಆಡಿಸುತ್ತಿದ್ದ. ಬೌಲಿಂಗ್‌ನಲ್ಲಿ "ವೆರೈಟಿ" ಇರಲಿ ಅಂತ ಅರ್ಥಮಾಡಿಕೊಳ್ಳ ಬೇಡಿ. ವೇಣುವಿನ ಬಾಯಿಯನ್ನು ಹದ್ದುಬಸ್ತಿನಲ್ಲಿ ಇಡಲು ನನಗೆ ಗೊತ್ತಿದ್ದ ಒಂದೇ ಒಂದು "ಟ್ಯಾಕ್ಟಿಸ್" ಎಂದರೆ ಬದರಿಯನ್ನು ಆಡಿಸುವುದು.

ಬದರೀ ವೃತ್ತಿಯಲ್ಲಿ ಸ್ಕೂಲ್ ಮಾಸ್ಟರ್. ವೇಣು ನಾಲ್ಕು-ಐದು ಬಾರಿ ಎಸ್.ಎಸ್.ಎಲ್.ಸಿ.ಯಲ್ಲಿ ಡುಂಕಿ ಹೊಡೆದ ಮೇಲೆ ಪಾಠ ಹೇಳಿಸಿ ಕೊಳ್ಳುವುದಕ್ಕೆ ಬದರಿಯ ಹತ್ತಿರ ಹೋಗುತ್ತಿದ್ದ. ಬದರೀ ಕೂತುಕೊಂಡೋ ಅಥವಾ ನಿಂತುಕೊಂಡೋ ಪಾಠ ಹೇಳುತ್ತಿದ್ದರೆ, ವೇಣು ಮಲಗಿಕೊಂಡು ಅದನ್ನು ಕೇಳುತ್ತಿದ್ದ. ಒಮ್ಮೊಮ್ಮೆ ಮಲಗಿದ್ದ ವೇಣು, ಗೊರಕೆ ಹೊಡಿ ಯುವುದನ್ನು ಕಂಡ ಬದರೀ ಅವನಿಗೆ ಶಾಲು ಹೊದಿಸಿ ಹೊರ ಹೋಗುತ್ತಿದ್ದ. ಹೀಗಿತ್ತು ಈ ಗುರು ಶಿಷ್ಯರ ಸಂಬಂಧ. ಅದೇ ಕಾರಣದಿಂದಲೋ ಏನೋ, ಬದರಿಯ ಎದುರು ವೇಣು ತನ್ನ ಹೊಲಸು ಬಾಯಿ ತೆರೆಯಲು ಹೆದರುತ್ತಿದ್ದ. ಮ್ಯಾಚ್ ಸರಾಗವಾಗಿ, ಶಾಂತಿಯುತವಾಗಿ ನಡೆಯಬೇಕಾದರೆ, ನಾನು ಬದರಿ ಯನ್ನು ಆಡಿಸಲೇಬೇಕಾಗಿತ್ತು.

ವೇಣು ಹತ್ತನೇ ಬ್ಯಾಟ್ಸ್‌ಮನ್ ಮತ್ತು ಬದರೀ ಹನ್ನೊಂದನೇ ಬ್ಯಾಟ್ಸ್ ಮನ್. ಇಬ್ಬರಲ್ಲೊಬ್ಬರು ರನ್ ಔಟ್ ಆಗಿ ಪಂದ್ಯ ಮುಗಿಯುವುದು ವಾಡಿಕೆ. ಬದರೀ ತೆಪ್ಪಗೆ ಪೆವಿಲಿಯನ್‌ಗೆ ಹಿಂತಿರುಗಿದರೆ, ವೇಣು ಎಲ್ಲರನ್ನೂ ಶಪಿಸುತ್ತಾ ಹಿಂತಿರುಗುತ್ತಿದ್ದ. ಒಂದು ಮ್ಯಾಚ್‌ನಲ್ಲಿ ಎರಡನೇ ಓಪನಿಂಗ್ ಬ್ಯಾಟ್ಸ್‌ಮನ್ ಇಲ್ಲದ್ದರಿಂದ ವೇಣು ಆ ಜಾಗವನ್ನು ಅಲಂಕರಿಸಿದ. ಅವನ ಗ್ರಹಚಾರಕ್ಕೆ ಒಂದನೆಯ ಬ್ಯಾಟ್ಸ್‌ಮನ್ ನಾನು. ನಾನು ಆಡಿದ ಮೊದಲ ಚೆಂಡು ನೇರ ವಾಗಿ ಹತ್ತಿರದ ಫೀಲ್ಡರ್‌ಗೆ ಹೋಯಿತು. ವೇಣು ತಕ್ಷಣ "ಎಸ್. ರನ್" ಅಂತ ಕೂಗಿಕೊಳ್ಳುತ್ತಾ ನನ್ನ ಕಡೆಗೆ ನುಗ್ಗಿದ. ನಾನು "ನೋ ಅಂತ ಕಿರಿಚಿ

ಕೊಳ್ಳುವಷ್ಟರಲ್ಲಿ ಅರ್ಧ ದೂರ ಬಂದಿದ್ದ. ತಕ್ಷಣ ಬ್ರೇಕ್ ಹಾಕಿ ರಿವರ್ಸ್ ಮಾಡುವಷ್ಟರಲ್ಲಿ ರನ್ ಔಟ್ ಆದ. ಅವನು ಬ್ರೇಕ್ ಹಾಕಿದ ರಭಸಕ್ಕೆ ಕೆಳಗಿದ್ದ ಬ್ಯಾಟ್ ಕಿತ್ತುಕೊಂಡು ಬಂದಿತು. ಸರಿ, ಬ್ಯಾಟನ್ನೇ ಶಪಿಸುತ್ತಾ, ಒಂದು ಬಾಲೂ ಆಡದೇ ಹಿಂದಿರುಗಿದ. ಒಳಗೆ ಬರುತ್ತಿದ್ದ ಮೂರನೇ ಬ್ಯಾಟ್ಸ್‌ಮನ್‌ನನ್ನು ನಿಲ್ಲಿಸಿ, "ಚೆಂಡು ಎರಡೂ ಕಡೆ ಸ್ವಿಂಗ್ ಆಗುತ್ತಿದೆ ಹುಷಾರಾಗಿ ಆಡು" ಅಂತ ಉಪದೇಶ ಮಾಡಿ ಹೊರಬಿದ್ದ. ಯಥಾ ಪ್ರಕಾರ ಬದರೀ ಸಹ, ವೇಣುವಿನ ಸಹಾಯವಿಲ್ಲದೇ ಇದ್ದರೂ ರನ್ ಔಟ್ ಆದ.

ಆ ದಿನ ಸಾಯಂಕಾಲ ಇಬ್ಬರೂ ನನ್ನ ಹೊಲಸು ಬಾಯಿಗೆ ತುತ್ತಾದರು. ವಾಚಾಮ ಗೋಚರವಾಗಿ ಬೈದ ನಂತರ ಮುಂದಿನ ಪಂದ್ಯದಲ್ಲಿ ಯಾರಾದರೂ ರನ್ ಔಟ್ ಆದರೆ, ನಂತರದ ಪಂದ್ಯಗಳಿಗೆ ಇಬ್ಬರಿಗೂ ಅರ್ಧಚಂದ್ರ ವಾಗುತ್ತದೆ ಅಂತ ಹೆದರಿಸಿದೆ.



ಮುಂದಿನ ಪಂದ್ಯದಲ್ಲಿ ನಮ್ಮದು ಮೊದಲು ಫೀಲ್ಡಿಂಗ್. ಒಂದೇ ಕ್ಯಾಚನ್ನು. ವೇಣು ಬದ್ರೀ ಇಬ್ಬರೂ ಹಿಡಿಯಲು ಹೋಗಿ ಒಬ್ಬರಿಗೊಬ್ಬರು ಡಿಕ್ಕಿ ಹೊಡೆದು ಕಾಲು ಮತ್ತು ತಲೆಬುರುಡೆಗಳನ್ನು ಊದಿಸಿಕೊಂಡರು. ಕ್ಯಾಚ್ ಎತ್ತಿ ಹಾಕಿ ನನ್ನ ಕೈಯಲ್ಲಿ ಬೈಯಿಸಿಕೊಂಡರು. ಇವರಿಬ್ಬರ ಬ್ಯಾಟಿಂಗ್ ಬರುವ ಹೊತ್ತಿಗೆ ಇಬ್ಬರ ಕಾಲೂ ಸಾಕಷ್ಟು ಊದಿಕೊಂಡು, ಇಬ್ಬರೂ ಓಡುವ ಸ್ಥಿತಿಯಲ್ಲಿರಲಿಲ್ಲ. ಸರಿ, ಇವರ ಆಪ್ತ ಸ್ನೇಹಿತರಾದ ಸೀನಿ ಮತ್ತು ರಾಜನ್ ಇವರಿಗೆ ರನ್ನರ್ಸ್ ಆದರೂ ರಾಜನ್ ಅಪ್ಪಟ ಕಿವುಡ. ಪಕ್ಕದಲ್ಲಿ ಬಾಂಬ್ ಬಿದ್ದರೂ ಅವನಿಗೆ ಕೇಳಿಸುತ್ತಿರಲಿಲ್ಲ. ವೇಣು ಮೊದಲ ಬಾಲು ಬಾರಿಸಿದ, ಬಾಲು ಕವರ್ ಫೀಲ್ಡರ್ ಕಾಲಿಗೆ ಬಡಿದು ಒಂದೆರಡು ಗಜ ಪಕ್ಕಕ್ಕೆ ಹೋಯಿತು.

ಎಸ್. "ರನ್" ಅಂತ ವೇಣು ಮುನ್ನುಗ್ಗಿದ. ಆದರೆ, "ಕೆಪ್ಟ ರಾಜನ್" ಇದನ್ನು ಕೇಳಿಸಿಕೊಳ್ಳದೇ ಫೀಲ್ಡರ್‌ನ ನೋಡುತ್ತಾ ನಿಂತಿದ್ದ. ವೇಣುವಿನ ರನ್ನರ್ ಸೀನಿ ಸಹ ವೇಣುವಿನ ಜೊತೆಯಲ್ಲಿ ಓಡಲು ಶುರು ಮಾಡಿದ, ಇವರಿಬ್ಬರೂ ಓಡುವು ದನ್ನು ಕಂಡು ಗಾಬರಿಯಾದ ಬದರೀ "ನೋ – ನೋ" ಅಂತ ಕೂಗುತ್ತಾ ತಾನೂ ಓಡಿದ. ಈ ಮೂರೂ ಜನರೂ ಓಡುವುದನ್ನು ಕಂಡ ರಾಜನ್ ತಾನೂ ಓಡುವುದಕ್ಕೆ ಶುರು ಮಾಡಿದ. ಪಿಚ್ ಮಧ್ಯ ಭಾಗಕ್ಕೆ ಎಲ್ಲರೂ ಬರುವ ಹೊತ್ತಿಗೆ, ವೇಣು ಬದರಿಗೆ ತಾವು ಓಡಬಾರದು ಅಂತ ಜ್ಞಾನೋದಯ ವಾಯಿತು. ಸರಿ ಇಬ್ಬರೂ ಹಿಂದೆ ಓಡಿದರು. ಇದನ್ನು ನೋಡಿದ ರಾಜನ್ ಹಾಗೂ ಸೀನಿ ಇಬ್ಬರೂ ವಿರುದ್ಧ ದಿಕ್ಕಿನಲ್ಲಿ ಓಡಿದರು. ಇದನ್ನು ನೋಡಿದ ವೇಣು, ಬದರೀ ಮತ್ತೆ "ನೋ ನೋ" ಎಂದು ಕಿರಿಚಿಕೊಳ್ಳುತ್ತಾ ಅವರನ್ನು ಬೆನ್ನಟ್ಟಿದರು, 5 ಸೆಕೆಂಡಿನಲ್ಲಿ ನಾಲ್ಕು ಜನರೂ ಒಂದು ವಿಕೆಟ್ ಹತ್ತಿರ ಒಬ್ಬರ ಮುಖ ಒಬ್ಬರು ನೋಡುತ್ತಾ ನಿಂತುಕೊಂಡರು. ಕಕ್ಕಾಬಿಕ್ಕಿಯಾದ ಅಂಪೈರ್ ಔಟ್ ಅಂತ ಕೂಗಿದ. ಯಾರು ಔಟ್ ಎಂದು ಹೇಳುವ ಗೋಜಿಗೆ ಹೋಗ ಲಿಲ್ಲ. ಅದನ್ನು ನೋಡಿದ ನಮಗೆಲ್ಲಾ ನಕ್ಕು ನಕ್ಕು ಹೊಟ್ಟೆ ಹಿಡಿದುಕೊಂಡಿದ್ದ ರಿಂದ, ಅವರನ್ನು ಶಿಕ್ಷಿಸುವ ವಾಗ್ದಾನವನ್ನು ಮರೆಯಬೇಕಾಯಿತು,

ತವರಿಗೆ ಹೋದ ಮಡದಿಗೊಂದು—ಪತ್ರ

—ಡಾ. ಮುರಲೀಧರ ದೇಶಪಾಂಡೆ

ಡಿಯರ್ ರಾಧಾ,

ನೀನು ತವರಿಗೆ ಹೋಗಿ ಹದಿನೈದು ದಿನಗಳು ಸಂದುವು. ನಿನ್ನ ಎರಡೂ ಪತ್ರಗಳು ತಲುಪಿದವು. ಎರಡರಲ್ಲಿಯೂ ನಾಲ್ಕು—ನಾಲ್ಕು ಸಾರೆ ಆರೋಗ್ಯ ಬಗ್ಗೆ ಕಾಳಜಿ ವಹಿಸಲು ಬರೆದಿದ್ದೀಯಾ. ಥ್ಯಾಂಕ್ಸ್, ನೀನು ಅಲ್ಲಿ ತುಂಬ ಆರಾಮ ದಿಂದಿರುವ ಸಮಾಚಾರ ತಿಳಿದು ಮನಸ್ಸಿಗೆ ಹಿತವೆನಿಸಿತು ನಾನೂ ಇಲ್ಲಿ ಆರಾಮಾ ಗಿಯೇ ಇದ್ದೇನೆ.

ಇಲ್ಲಿ ಬಿಸಿಲು ವಿಪರೀತ ನಿಮ್ಮಲ್ಲಿಯೂ !ಬಿಸಿಲೂ ಇರಬಹುದಲ್ಲ ? ಆದರೂ ತವರೂರಿನ ಬಿಸಿಲು ಅಷ್ಟೊಂದು ತೀಕ್ಷ್ಣವಾಗಿರಲಿಕ್ಕಿಲ್ಲ, ಅಲ್ವಾ ?

ಇಲ್ಲಿ ನಾನು ದಿನಾ ಮುಂಜಾನೆ ಎದ್ದು ಹಾಲು ಕಾಯಿಸಿ ಕುಡಿದು-ದವಾ ಖಾನೆಗೆ ಹೋಗುತ್ತೇನೆ. ಮಧ್ಯಾಹ್ನ ಮನೆಗೆ ಮರಳಿ ಬಂದು ಅನ್ನಮಾಡಿಕೊಂಡು ಉಣ್ಣುತ್ತೇನೆ. ರಾತ್ರಿ......ಹಾಯಾಗಿ ತೆಪ್ಪಗೆ ಮಲಗುತ್ತೇನೆ. ಆರಾಮಾಗಿ ಇದ್ದೇನೆ.

ಒಂದು ದಿನ ಕುಡಿದು ಉಳಿದ ಹಾಲಿಗೆ ಹೆಪ್ಪು ಹಾಕಿರಲಿಲ್ಲ. ಮಧ್ಯಾಹ್ನ ಬರುವುದರೊಳಗಾಗಿ ಹಾಲು ಕೆಟ್ಟುಹೋಗಿತ್ತು. ನಿನ್ನ ತವರೂರಿನ ಬಳುವಳಿ ಯಾದ ಎಮ್ಮೆಯ ಗಟ್ಟಿ ಹಾಲು, ಚೆಲ್ಲಲು ಮನಸ್ಸು ಒಪ್ಪಲಿಲ್ಲ. ಹಾಗೆಯೇ ಅನ್ನಕ್ಕೆ ಸುರುವಿಕೊಂಡು ಊಟ ಮಾಡಿದೆ. ನಂತರ ಹೊಟ್ಟೆಯಲ್ಲಿ ಕಸಿವಿಸಿ ಪ್ರಾರಂಭ ವಾಯಿತು, ರಾತ್ರಿ ನಿದ್ರೆ ಬರಲಿಲ್ಲ. ಯಾವುದೋ ಮಾತ್ರೆ ನುಂಗಿದೆ. ನನಗೆ ಏನೂ ಆಗಲಿಲ್ಲ. ಎಲ್ಲ ಆರಾಮಾಗಿಯೇ ಇದ್ದೇನೆ.

ಮತ್ತೊಂದು ದಿನ ರಾತ್ರಿ ಮನೆಗೆ ತಡಮಾಡಿ ಬಂದೆ. ಹೋಟಲಲ್ಲಿ ಟಿಫಿನ್ ಮುಗಿಸಿದ್ದೆ. ಹಸಿವು ಇರಲಿಲ್ಲ. ಹಾಗೆಯೇ ಮಲಗಿದೆ. ಮುಂಜಾನೆ ಏಳುವುದ ರೊಳಗಾಗಿ ರಾತ್ರಿಯಲ್ಲಿ ಉಳಿದ ಅನ್ನ ವಾಸನೆಯಾಗಿತ್ತು, ಏನೂ ಆಗದು ಎಂದು

ಕೊಂಡು, ಬೇರೆ ಅನ್ನಬೇಯಿಸಲು ಬೇಜಾರು ಪಟ್ಟುಕೊಂಡು–ಕರೆಂಟು ಕೂಡ ಕೈಕೊಟ ದ್ದಕ್ಕೆ–ಅದೇ ಅನ್ನ ತಟ್ಟೆಗೆ ಹಾಕಿಕೊಂಡು ಊಟ ಮುಗಿಸಿದೆ. ಅರ್ಧ ಗಂಟೆಯಾದ ಮೇಲೆ ಎರಡು ಸಲ ವಾಂತಿ, ಮೂರು ಸಲ ಭೇದಿಯಾಯಿತು. ಪಕ್ಕಕ್ಕೆ ನಮ್ಮ ಡಾ ಬೂದಿ ಇಲ್ವಾ ? ಅವರು ಬಂದು ಎರಡು ಇಂಜೆಕ್ಷನ್ ಕೊಟ್ಟರು, ಇನ್ನೊಂದು ಸಲ ವಾಂತಿ–ಭೇದಿಯಾಗಿದ್ದರೆ ಗ್ಲೂಕೋಸ್ ಏರಿಸಬೇಕಾ ಗುತ್ತಿತ್ತೆಂದು ಹೇಳಿದರು. ಈಗ ಆರಾಮಾಗಿದೆ. ನಾನೂ ಆರಾಮದಿಂದ ಇದ್ದೇನೆ.

ದಿನಾ ಮೊಸರು ಅನ್ನ– ಮೊಸರು ಅನ್ನ ಉಂಡು ಬೇಜಾರಾಗಿತ್ತು. ಅದಕ್ಕೆ ನೀನು ಹೇಳಿದ್ದಿಯಲ್ಲಾ ಎಂದು ಪಕ್ಕದ ಆಂಟಿ ಮನೆಗೆ ಒಂದು ಬಟ್ಟಲು ಹಿಡಿದು ಕೊಂಡು ಹೋದೆ. ಅಂದು ಅವರು ಸ್ವಲ್ಪ ಹುಳಿ ಕೊಟ್ಟರು. ಮರುದಿನ ನನ, ಕೈಯ್ಯಲ್ಲಿನ ಬಟ್ಟಲು ಕಾಣುತ್ತಲೇ 'ಧಪಾ' ಎಂದು ಬಾಗಿಲು ಹಾಕಿಕೊಂಡರು, ಅಂದಿನಿಂದ ಅವರ ಮನೆಯ ಹಾದಿ ತುಳಿದಿಲ್ಲ. ಬದಲಾಗಿ ಎದುರು ಮನೆಯ ಮಾಮಿ ಮನೆಗೆ ಹೋಗಿ ಸ್ವಲ್ಪ ಪಲ್ಲೆ ಇದ್ದರೆ ಕೊಡಿ ಎಂದು ಕೇಳಿದೆ. ಆಗೆ ಮನೆ ಯಲ್ಲಿ ಮಾಮಿ ಇರಲಿಲ್ಲ. ಅವರ ಮಗಳು ಇಪ್ಪತ್ತು ಹರೆಯದ ಅವಿವಾಹಿತೆ ಆಶಾ ಇದ್ದಾಳಲ್ಲ. ಅವಳು ಬಂದು "ಮಾಮ, ನೀವೇಕೆ ಬಂದಿರಿ ? ಕರೆದರೆ ನಾನೇ ಬರುತ್ತಿದ್ದೇನಲ್ಲ...... ಚೆನ್ನಾಗಿ ಮಾಡಿ ಕೊಡುತ್ತಿದ್ದೆ. ರುಚಿಮಾಡಿ ಉಣಬಹು ದಿತ್ತು ಅಂದಳು. ನಾನೇ ಅಂಜಿ ಸುಮ್ಮನಿದ್ದೇನೆ. ಮತ್ತೆ ಅವಳ ಗೊಡವೆಗೇ ಹೋಗಿಲ್ಲ. ಸಧ್ಯ ನಾನು ಆರಾಮಾಗಿಯೇ ಇದ್ದೇನೆ.

ಗುರುವಾರ ಒಪ್ಪತ್ತು ಅಲ್ಲವೇ ? ಅದಕ್ಕೆ ಅವಲಕ್ಕಿಗಾಗಿ ಎಲ್ಲ ಡಬ್ಬಿಗಳನ್ನು ಹುಡುಕಿದೆ. ಸಿಗಲಿಲ್ಲ. ತಡವಾಗಬಹುದೆಂದು ಅಂಗಡಿಯಿಂದ ತಂದು ಡೈರೆಕ್ಟಾಗಿ ಒಂದು ಪಾತ್ರೆಗೆ ಹಾಕಿದೆ. ನನಗೆ ಕೇರಲು ಬಾರದು. ಅಂಥದ್ದಕ್ಕೆ ಎಣ್ಣೆ, ಖಾರ ಪುಡಿ. ಮೊಸರು ಬೆರೆಸಿ ಒಂದು ತುತ್ತು ಬಾಯಿಗಿಟ್ಟೆ. ಓಹೋ. ಮರಳು ಮಯ ...ಇರಲಿ ಎಂದು ಅವಲಕ್ಕಿ ಜಗಿಯದೆ ನುಂಗಲು ಪ್ರಾರಂಭಿಸಿದೆ. ಐದಾರು ತುತ್ತು ನುಂಗುವುದರೊಳಗಾಗಿ ಏನೋ ವಾಸನೆ ಬಂದಂತಾಯಿತು, ಮತ್ತೆ ಅವಲಕ್ಕಿ ಬಿಚ್ಚಿನೋಡಲಾಗಿ ಅಸಂಖ್ಯ ಹುಳುಗಳು. ಅದನ್ನು ಅಷ್ಟಕ್ಕೆ ಬಿಟ್ಟೆ. ಅಷ್ಟರಲ್ಲಿ ಕಂಪೌಂಡರ್ ಬಂದು ರೋಗಿಗಳು ಕಾಯುತ್ತಿದ್ದಾರೆಂದು ಹೇಳಿದ್ದಕ್ಕೆ––ದವಾಖಾನೆಗೆ ಉಪವಾಸ ಹೋದೆ. ಅಂದು ರೋಗಿಗಳು ಹೆಚ್ಚಾಗಿದ್ದ ಕಾರಣ ಎರಡು ತಾಸು ತಡಮಾಡಿ ಮನೆಗೆ ಬಂದೆ, ಬಂದು ಅನ್ನ ಮಾಡಿಕೊಂಡು ಊಟ ಮಾಡಿದೆ, ಹೌದು, ಅದೇ ಮೊಸರಿನ ಜೊತೆಗೆ. ಅಂತೂ ಆರಾಮಾಗಿಯೇ ಇದ್ದೇನೆ.

ನೀನಿಲ್ಲ. ರಾತ್ರಿ ನಿದ್ದೆ ಸರಿಯಾಗಿ ಬಾರದು. ಅದಕ್ಕೆಂದು ಸಿನೆಮಾ ನೋಡಲು ಹೋಗುತ್ತೇನೆ. ತಡವಾಗಿ ಮಲಗಿದ್ದಕ್ಕೆ ತಡವಾಗಿಯೇ ಏಳುತ್ತೇನೆ. ಏಳುವುದರೊಳಗಾಗಿ ನಲ್ಲಿ ಬಂದು ಹೋಗಿರುತ್ತದೆ. ಆದರೇನಾಯಿತು ? ಎರಡು-ಮೂರು ದಿನದ ನೀರು ಕುಡಿಯುತ್ತೇನೆ. ಏನೂ ಆಗುವುದಿಲ್ಲ. ಎಲ್ಲ ಆರಾಮಾಗಿಯೇ ಇದ್ದೇನೆ.

ನಿನ್ನ ಇದಿರು ನಾನು ಎಂದೂ 'ಇಸ್ಪೀಟ್' ಆಡಿದವನಲ್ಲ. ಈಗ ರಾತ್ರಿ ಟೈಮ್ ಪಾಸ್ ಎಂದು ಪ್ರತಿದಿನ ಆಡುತ್ತೇನೆ. ದಿನಕ್ಕೆ ಇಪ್ಪತ್ತು-ಮೂವತ್ತು ಕಳೆದುಕೊಳ್ಳುತ್ತೇನೆ. ನೀನೇನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ, ನಾನೂ ಅಷ್ಟೆ. ಹಣವೇನು ಮಹಾ ? ನೀನೂ ಅಲ್ಲಿ ಆರಾಮದಿಂದಿರು. ನಾನು ಇಲ್ಲಿ ...ಆರಾಮವಾಗಿಯೇ ಇದ್ದೇನೆ.

ರಾತ್ರಿ ತಡವಾಗಿ ಮಲಗಿ ತಡವಾಗಿ ಎದ್ದರೆ ದವಾಖಾನೆ ಸೇರಲು ತಡವಾಗುತ್ತದೆ. ಕೆಲವು ರೋಗಿಗಳು ದಾರಿ ಕಾದು-ಕಾದು ಬೇರೆಡೆಗೆ ಹೋಗುತ್ತಿರುವುದಾಗಿ ಕಂಪೌಂಡರ್ ಹೇಳುತ್ತಾನೆ. ಹಾಗೆಯೇ ಮಧ್ಯಾಹ್ನ ನಿದ್ದೆಬರಲು ಪ್ರಾರಂಭವಾಗುತ್ತದೆ. ಆಗ ರೋಗಿಗಳು ಇದ್ದರೂ ಮನೆಗೆ ಬಂದುಬಿಡುತ್ತೇನೆ. ಆ ದಿನದ 'ಕಲೆಕ್ಷನ್' ಸ್ವಲ್ಪ ಕಡಿಮೆಯಾಗುತ್ತದೆ. ಏನಾಗುತ್ತದೆ ಕಡಿಮೆಯಾದರೆ ? ನೀನೇನೂ ಕಾಳಜೀ ಮಾಡಬೇಡ. ಆರಾಮಾಗಿರು. ಏಕೆಂದರೆ ನಾನೂ ಇಲ್ಲಿ ಆರಾಮಾಗಿ ಇದ್ದೇನೆ,

ನೀನಿಲ್ಲವೆಂದು ನಾನು ಮನೆಗೆ ಬರುವುದೇ ಕಡಿಮೆ, ಅದಕ್ಕಾಗಿ ಮನೆ ಕೆಲಸದವಳು ಮೂರು-ನಾಲ್ಕು ದಿನಕ್ಕೊಮ್ಮೆ ಬರುತ್ತಾಳೆ. ಮನೆಯೆಲ್ಲ ಹೊಲಸಾಗಿದೆ. ಧೂಳು ತುಂಬಿದ ನೆಲದಲ್ಲಿ ಕುಳಿತೇ ಉಣ್ಣುತ್ತೇನೆ. ಹಾಗೇ ಅಲ್ಲಿಯೇ ಮಲಗುತ್ತೇನೆ. ನಾನೇ ಸ್ವಲ್ಪ ಗುಡಿಸೋಣವೆಂದರೆ—ರಾತ್ರಿ ತಡವಾಗಿದೆ ಈಗೆಲ್ಲಿ ಅಂದುಕೊಂಡು ಅಲ್ಲಿಯೇ ಆರಾಮಾಗಿ ಮಲಗುತ್ತೇನೆ.

ನೀ ನೆಟ್ಟ ಗಿಡಗಳು, ಬಳ್ಳಿಗಳು ಗಾರ್ಡನ್‌ನಲ್ಲಿ ಒಣಗಿ ನಿಂತಿವೆ. ಹೌದು, ಬಿಸಿಲು ಬಹಳ, ನಾನೇ ನೀರು ಬಿಡಬೇಕೆಂದರೆ ನನಗೆ ಸಮಯವೇ ಇಲ್ಲ. ಆ ಗಿಡಬಳ್ಳಿಗಳು ನಿನಗಾಗಿ—ಅಲ್ಲಲ್ಲ ನೀ ನಲ್ಲೇ ಇರಬಹುದು—ಮಳೆಗಾಗಿ ದಾರಿ ಕಾಯ್ತು ಇವೆ.

ನೀನು ಹೋದ ಮೇಲೆ ನನಗೆ ಮುಂಜಾನೆ ವ್ಯಾಯಾಮ ಮಾಡಲು ವೇಳೆಯೇ ಸಿಗದಾಗಿದೆ, ಅಲ್ಲದೆ ಊಟವು ಸರಿಯಾಗಿ ಹೋಗುತ್ತಿಲ್ಲ. ನನ್ನ ತೂಕ ಹದಿನೈದು

ದಿನಗಳೊಳಗೆ ಮೂರು ಕೆ.ಜಿ. ಇಳಿದಿದೆ. ಇಳಿದರೇನಾಯಿತು ? ಕೆಲವರು ಒಂದು ಕೆ. ಜಿ. ಇಳಿಸಲು ಶತ ಪ್ರಯತ್ನ ಮಾಡುತ್ತಾರೆ. ನನ್ನ ತೂಕ ಕಡಿಮೆಯಾಗಿದೆ ಯೆಂದು ನೀನೇನೂ ಚಿಂತೆ ಮಾಡಬೇಡ. ಆಮೇಲೆ ಎಲ್ಲ ಸರಿಹೋಗುತ್ತೆ. ನೀನು ರಾಮಾಗಿರಬಹುದು. ನಾನಿಲ್ಲಿ ಆರಾಮಾಗಿಯೇ ಇದ್ದೇನೆ.

ನೀನಿಲ್ಲಿಗೆ ಬಂದ ಮೇಲೆ ಏನನ್ನೂ ಪ್ರಶ್ನಿಸುವುದಿಲ್ಲವೆಂದರೆ–ಒಂದು ವಿಷಯ ಹೇಳುತ್ತೇನೆ. ಅಂಥದ್ದೇನಲ್ಲ ನನ್ನ ಗೆಳೆಯ ಡಾ. ದೇಶಮುಖ್ ಇದಾನಲ್ಲ ಆತನೊಂದಿಗೆ ಒಂದು ಪಾರ್ಟಿಗೆ ಹೋಗಿದ್ದೆ. ಅಲ್ಲಿ ಸ್ವಲ್ಪ ಅದು–ಇದು ತಿಂದಿದ್ದಾ ಯಿತು. ಅವನು ಅಷ್ಟಕ್ಕೆ ಬಿಡಲಿಲ್ಲ. ತೀರ್ಥಪಾನವೂ ಆಯಿತು. ಅಷ್ಟಕ್ಕೆ ಜೋಲಿ ಹೊಡೆಯುತ್ತಲೇ ಮನೆಗೆ ಬರುತ್ತಿದ್ದೆ. ನಮ್ಮ ಮನೆಯ ಮುಂದೆ ಗಟಾರ ಇದೆ ಅಲ್ಲವೆ ? ಅದರಲ್ಲಿ ಬಿದ್ದೆನಂತೆ....ಯಾರೋ ಹೊತ್ತು ತಂದು ಮನೆ ಯಲ್ಲಿ ಹಾಕಿದರು. ಸ್ವಲ್ಪ ಸಮಯದ ನಂತರ ನೋವಾಗಿ ಎಚ್ಚರಗೊಂಡಾಗ ಎಡಗಾಲು ಅಳುಕುತ್ತಿದ್ದುದು ಅರಿವಿಗೆ ಬಂದಿತು. ಸರಿಯಾಗಿ ನಡೆಯಲು ಬರ್ರ‍ು ತ್ತಿಲ್ಲ. ಆದರೆ ಯಾವ ಎಲುಬೂ ಮುರಿದಿಲ್ಲ. ನೀನೇನೂ ವಿಚಾರ ಮಾಡಬೇಡ. ಕುಂಟುತ್ತಾ ದವಾಖಾನೆಯವರೆಗೆ ಹಾಗೂ–ಹೀಗೂ ಹೋಗಬಹುದು.....

ಇಲ್ಲಿ ಇನ್ನೊಂದು ಮಾತು ಹೇಳಲು ಮರೆತಿದ್ದೆ. ನೀನು ವಿವರಿಸಿದ ವಿಧಾನದ ಮೇರೆಗೆ, ತೊಂಡೆಕಾಯಿ ಹೇಗೂ ಗಾರ್ಡನ್‌ನಲ್ಲಿದ್ದುದನ್ನು ತಂದು, ಹೆಚ್ಚಿ ಸ್ವಲ್ಪ ಎಣ್ಣೆ ಹಾಕಿ ಬೇಯಿಸಲು ತೊಡಗಿ–ಹಾಗೆಯೇ ದಾಡಿ ಗೀರಿಕೊಳ್ಳಲು ಪ್ರಾರಂಭಿಸಿದೆ. ಗೀರಿಕೊಳ್ಳುವುದರಲ್ಲಿ ಮಗ್ನನಾಗಿದ್ದಂತೆಯೇ–ಗಪ್ಪನೆ ವಾಸನೆ ಬಂತು. ಹೋಗಿ ನೋಡಿದರೆ ತೊಂಡೆಕಾಯಿ ಕರಕಾಗಿತ್ತು. ಬೇಗನೆ ಗ್ಯಾಸ್‌ನಿಂದ ಇಳಿಸಲು ಹೋದೆ. ಇಕ್ಕಳ ಇರಲಿಲ್ಲ ಕೈಯಿಂದಲೇ ಇಳಿಸಿದೆ. ಬಹಳ ಬಿಸಿಯಾಗಿತ್ತಲ್ಲ ಅದಕ್ಕೆ ಎಡಗೈಯ ಎರಡು, ಬಲಗೈಯ ಮೂರು ಬೆರಳುಗಳು ಸುಟ್ಟಿವೆ. ಅಲ್ಲ–ಅಲ್ಲ, ಸ್ವಲ್ಪ ಸುಟ್ಟಿದೆ ನೋವು ಇದೆ. ಆದರೂ ಇಂಜೆಕ್ಷನ್ ಕೊಡಲು ಬರುತ್ತದೆ. ಧೀರ್ಘ ವಿಚಾರಕ್ಕೀಳಿಯಬೇಡ. ನಾನೋ–ಆರಾಮಾಗಿಯೇ ಇದ್ದೇನೆ.

ಇಂದು ಜೂನ್ ತಿಂಗಳ ಹತ್ತನೇ ತಾರೀಖು. ಇನ್ನೂ ಎರಡು ವಾರದವರೆಗೆ ಹುಡುಗರ ಅಭ್ಯಾಸ ಸರಿಯಾಗಿ ನಡೆಯುವುದಿಲ್ಲ. ಅದಕ್ಕೆ ನೀನು ಅವಸರ ಮಾಡಿ ಕೊಂಡು ಬರಬೇಡ. ಇನ್ನೂ ಎರಡು–ಮೂರು ವಾರ ಹಾಯಾಗಿದ್ದು–ಬರಬಹುದು. ಬೇಕಾದರೆ ಕಾಗದ ಬರೆ. ಮನಿಯಾರ್ಡರ್ ಮಾಡುತ್ತೇನೆ. ನೀನು ಅಲ್ಲೇ ಆರಾಮಾಗಿರು ನಾನು ಇಲ್ಲಿ ಆರಾಮಾಗಿಯೇ ಇದ್ದೇನೆ.... ಈ ಎಲ್ಲವುಗಳ ಹೊರತು ಬಾಕಿ ಕ್ಷೇಮ.

ನಿನ್ನ

ಮುರಳಿ

33

ಫೋನಿನಲ್ಲಿ ಪ್ರಶ್ನಾವಳಿ

—ಸಿ. ಪಿ. ರಾಜೇಶ್

ಶಂಭು ಡಯಲ್ ಮಾಡಿದ ನಂ. 71684

ಟ್ರಿನ್....ಟ್ರಿನ್—ಟ್ರಿನ್

ಆ ಕಡೆಯಿಂದ ಎರಡೇ ಘಂಟೆಗಳಲ್ಲಿ ಫೋನ್ ಎತ್ತಿಕೊಂಡರು. ಶಂಭುವಿಗೆ ಆಶ್ಚರ್ಯ! ಇದೇನು ಇಷ್ಟು ಬೇಗ ಫೋನ್ ಎತ್ತಿದರಲ್ಲಾ ಎಂದು.

"ಮಿಸ್ಟರ್. ಸಿದ್ಲಿಂಗು ಇದಾರಾ ?" ಪ್ರಶ್ನಿಸಿದ.

"ಇಲ್ಲ ..."

"ಯಾವಾಗ ಬರ್‍ತಾರೆ ?"

"ಗೊತ್ತಿಲ್ಲ"

"ಅವರು ಎಲ್ಲಿಗೆ ಹೋಗಿದಾರೆ ಅಂತೇನಾದರೂ ತಿಳಿದಿದೆಯಾ ಸ್ವಾಮಿ ?"

"ಇಲ್ಲ ತಿಳಿದಿಲ್ಲ..."

"ರಜಾ ಹಾಕಿದಾರೇಂತ ಕಾಣುತ್ತೆ. ಬಹುಶಃ"

"ಗೊತ್ತಿಲ್ಲ"

"ಅವರು ಬಂದ್ರೆ ದಯವಿಟ್ಟು ಶಂಭು ಫೋನ್..."

"ಸಾರಿ, ಅವರು ಈಗ ಬರುವ ಸ್ಥಿತಿಯಲಿಲ್ಲ."

"ಯಾಕೆ ಏನಾಗಿದೆ"

ಶಂಭುವಿಗೆ ಆಶ್ಚರ್ಯ ಬೆಳಿಗ್ಗೆ ತಾನೇ ಸಿದ್ಲಿಂಗು ಸಿಕ್ಕಿ, ಫೋನ್ ಮಾಡು, ಆಫೀಸಿನಲ್ಲೇ ಇರುತ್ತೇನೆ ಎಂದು ಹೇಳಿದ್ದ, ಈವಾಗ ಹೇಳದೆ ಕೇಳದೆ ಎಲ್ಲಿಗೋ ಹೋಗಿದ್ದಾನಲ್ಲಾ. ಬಾದ್ಮಾಷ್, ಬೇವಖೂಫ್... ಇತ್ಯಾದಿ ಇತ್ಯಾದಿಗಳನ್ನು ತನ್ನ ಮನದ ಕ್ಯಾಸೆಟ್ಟನ್ನು ಆನ್ ಮಾಡಿತು. ಸ್ಪೆಷಲ್ ಸುಸಂಸ್ಕೃತ ಕ್ಯಾಸೆಟ್! ಹೊಚ್ಚ ಹೊಸ ಮೂವಿ, "ಅಣ್ಣಾರವರ ಜ್ವಾಲಾಮುಖಿ" ರಿಲೀಸ್ ಆಗಿದೆ. ಟಿಕೆಟ್ ಬುಕ್ ಮಾಡಿಸಿರುತ್ತೇನೆ ಎಂದವನು....ಕಳ್ಳ ನನ್ಮಗ್... ಆ ಕಡೆಯಿಂದ ಉತ್ತರ ಬಂತು

"ಅವರು ಮಲಗಿದ್ದಾರೆ.

"ರೀ ಎಬ್ಬಿಸ್ರೀ ಅವ್ರನ್ನ....ಶಂಭು ಫೋನ್ ಮಾಡಿರೋದು ಅಂತ್ಹೇಳಿ ಗೊತ್ತಾಯ್ತಾ.... ಆ್ಞಂ ! ಹೌದು ಶಂಭೂಂತ ಹೇಳಿ"

"ಇಲ್ಲಾರೀ ಅವರು ಮಣ್ಣಲ್ಲಿ ಮಲಗಿದಾರೆ. ಮಲಗಿ ಎರಡು ವರ್ಷ ಆಯ್ತು, ಉಸಿರಾಡ್ತಾ ಇಲ್ಲ, ಹಾರ್ಟ್ ಬೀಟ್ಸ್ ಇಲ್ಲಾ....ಅಲ್ಲಾಪ್ಪಾ ಇಲ್ಲ, ಗೊರಕೆ ಹೊಡೀತಾ ಇಲ್ಲ...ಇನ್ನೂ ಅರ್ಥಾ ಆಗ್ಲಿಲ್ಲದೇನ್ರೀ....ಸಿದ್ಲಿಂಗು ಸತ್ಹೋಗಿ ಸಾರಿ ನೆಗೆದು ಬಿದ್ದು ಎರಡು ವರ್ಷ ಆಯ್ತು ತಿಳೀತೇನ್ರಿ........

ಶಂಭು ನಂಬಲಿಲ್ಲ. ಬೆಳಿಗ್ಗೆ ಆತ ಸಿದ್ಲಿಂಗುವನ್ನು ನೋಡಿದಾಗ ಆತನ ಕಾಲಂ ಹಿಂದು ಮುಂದಾಗಿರಲಿಲ್ಲ. ಆ ಕಾರಣ ಆತ ಖಂಡಿತ ದೆವ್ವವಾಗಿರಲಿಕ್ಕಿಲ್ಲ.


"ನಿಮ್ಮದು ಯಾವ ನಂಬರ್ ಸಾರ್?"

ಅನುಮಾನದಿಂದಲೋ ಏನೋ ಕ್ವೊಶ್ಚನಿಸಿದ

"71486" ಉತ್ತರ ಬಂತು.

"ರಾಂಗ್ ನಂಬರ್" ಶಂಭು ಹೇಳಿದವನೇ ರಿಸೀವರನ್ನು ಕುಕ್ಕೆತ್ತಿ [ಕುಕ್ಕಿ+ಎತ್ತಿ] ಡಯಲ್ ಮಾಡಿದ 71684.





Statement about ownership and other particulars about newspaper "APARANJI" to be published in the first issue every year after last day of February.

FORM IV

(See Rule 8)

1.	Place of Publication	....	Bangalore
2.	Periodicity	....	Monthly
3.	Printers Name	....	V. R. Nath
	Nationality	....	Indian
	Address	....	404, Sampige Road, Malleswaram, Bangalore-3.
4.	Publisher's Name	....	M. Shivakumar
	Nationality	....	Indian
	Address	....	Aparanji Karyalaya 36, 6th Main Road, Malleswaram, Bangalore-560 003
5.	Editors Name	....	M. Shivakumar
	Nationality	....	Indian
	Address	....	Aparanji Karyalaya 36, 6th Main Road, Malleswaram, Bangalore-560 003
6.	Name and address of individuals who own the newspaper and partners or share holders holding more than one percent of the total capital.	....	M. Shivakumar Sole Proprietor Aparanji Karyalaya 36, 6th Main, Malleswaram Bangalore-560 003

I, M. Shivakumar, hereby declare that the particulars given above are true to the best of my knowledge and belief

22-2-1986

For Signature of Publisher

M. SHIVAKUMAR

No. 23 AL 84-NT III

—: ಶುಭಾಶಯಗಳೊಂದಿಗೆ :—

ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರ್ನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ ;

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ